**<u>ಅಧ್ಯಾಯ – 36</u>**
**<u>ಕ್ರಿಸ್ತ ವಿರೋಧಿಯ ಬಗ್ಗೆ ಅಧ್ಯಯನ – ಭಾಗ –2–</u>**

ನಾವು ಇಂದು ಕ್ರಿಸ್ತವಿರೋಧಿ ಅಧ್ಯಯನದ ಎರಡನೇ ಭಾಗವನ್ನು ಧ್ಯಾನಿಸಲಿರುವಾಗ ಇನ್ನೂ ಆಳವಾದ ಸಂಗತಿಗಳನ್ನು ಅಧ್ಯಯನ ಮಾಡೋಣ.
ಹಿಂದಿನ ತರಗತಿಯಲ್ಲಿ ನಾವು ತಿಳಿದುಕೊಂಡ ಹಾಗೆ, ಎಲ್ಲಾ ಕ್ರಿಸ್ಟಿಯನ್ನರು ಹಾಗೂ ಜನರು ಯೋಚಿಸಿರುವಂತೆ ಕ್ರಿಸ್ತವಿರೋಧಿಯು ಏಕಮಾತ್ರ ವ್ಯಕ್ತಿ ಅಥವಾ ಭವಿಷ್ಯದಲ್ಲಿ ಇಡೀ ಲೋಕವನ್ನು ವಶಪಡಿಸಿಕೊಂಡು ರಾಜನಾಗಿ ಆಳಲಿರುವ ಅರಸನಲ್ಲವೆಂಬುದನ್ನು ಅರಿತುಕೊಂಡಿದ್ದೇವೆ.
ಯಾಕೆ?
ಯಾಕೆಂದರೆ ನಾವು ಸತ್ಯವೇದದ ಪ್ರಕಾರ ಗ್ರಹಿಸಿಕೊಳ್ಳುವಂತೆ –
**2 ಥೆಸಲೋನಿಕದವರಿಗೆ 2:7,8**
"ಅಧರ್ಮವು ಈಗಲೂ ಗುಪ್ತವಾಗಿ ತನ್ನ ಕಾರ್ಯವನ್ನು.........ಪ್ರಕಾಶದಿಂದ ಸಂಹರಿಸುವನು"
ಹೌದು! ಈ ಕ್ರಿಸ್ತವಿರೋಧಿಯು, ಅಂದರೆ "ಅಧರ್ಮಸ್ವರೂಪನು" ಅಪೋಸ್ತಲರ ಕಾಲದಲ್ಲೇ ಅಥವಾ ಮೊದಲನೆಯ ಶತಮಾನದಲ್ಲೇ ಕಾರ್ಯರೂಪಕ್ಕೆ ಬಂದು, ನಂತರ ಕ್ರಿಸ್ತನ ಎರಡನೆಯ ಬರುವಿಕೆಯಲ್ಲಿ ಸಂಹರಿಸಲ್ಪಡುವುದನ್ನು ಕಾಣುತ್ತೇವೆ.
ಕ್ರಿಸ್ತವಿರೋಧಿಯ ಈ ಕಾರ್ಯವು ತನ್ನನ್ನೂ ಸುಮಾರು 2000 ವರ್ಷಗಳ ಕಾಲದವರೆಗೆ ಕೊಂಡೊಯ್ಯುತ್ತದೆ.
ಖಂಡಿತವಾಗಿಯೂ ಯಾವುದೇ ಮನುಷ್ಯನು ಇಷ್ಟು ವರ್ಷ ಬದುಕಲು ಸಾಧ್ಯವಿಲ್ಲ.
ನಾಲ್ಕನೆಯದ ಕ್ರಿಸ್ತವಿರೋಧಿಯು ವ್ಯಯುಕ್ತಿಕ ವ್ಯಕ್ತಿಯಾಗಿರಲು ಸಾಧ್ಯವಿಲ್ಲ ಎಂಬುದನ್ನು ಅರಿತುಕೊಂಡಿದ್ದೇವೆ.
ಬದಲಾಗಿ "ಇವನು" ಅಥವಾ "ಇದು" ಸೈತಾನನಿಂದ ಉಂಟಾದ ವ್ಯವಸ್ಥೆಯಾಗಿದ್ದು "ಸಭೆಯೆಂಬ" ದೇವರ ಆಲಯದಲ್ಲಿ ಅದ್ಭುತ ಹಾಗೂ ಮಹಾತ್ಕಾರ್ಯಗಳನ್ನು ಮಾಡುವುದರ ಮೂಲಕ ಉಂಟಾದ ತಪ್ಪು ಮತ್ತು ಸುಳ್ಳು ಭೋದನೆಗಳಿಂದ ಸತ್ಯವನ್ನು ನಾಶಗೊಳಿಸುವುದಾಗಿದೆ.
ಹೌದು! ಈ ಕ್ರಿಸ್ತವಿರೋಧಿಯು ಸಭೆಯ ಒಳಗಡೆಯೇ ಕಾರ್ಯ ಸಾಧಿಸುತ್ತದೆ!
ಈ ಕ್ರಿಸ್ತವಿರೋಧಿಯ ದೇವಭಕ್ತರ ಮೇಲಿನ ಆಳ್ವಿಕೆಯು ಮೊದಲೇ ನಿಗದಿ ಮಾಡಿದ 1260 ವರ್ಷಗಳವರೆಗೆ ಮಾತ್ರ ಅನುಮತಿಸಲ್ಪಟ್ಟಿರುವುದನ್ನು ಕೂಡ ತಿಳಿದುಕೊಂಡಿದ್ದೇವೆ.
ಕ್ರಿಸ್ತವಿರೋಧಿಯೆಂದರೆ ಯಾರು? ಮತ್ತು ಈ ವ್ಯವಸ್ಥೆಯೆಂದರೆ ಏನು?
ಈ ಸತ್ಯವೇದವು ಬೋಧಿಸುವಂತೆ ಈ ಕ್ರಿಸ್ತವಿರೋಧಿ ವ್ಯವಸ್ಥೆಯು 2000 ವರ್ಷಗಳಿಂದ ಜೀವಂತವಾಗಿದ್ದರೂ ಕೂಡ, ಯಾರೊಬ್ಬರು ಇದನ್ನು ಗುರುತಿಸಲು ಏಕೆ ಸಾಧ್ಯವಾಗಿಲ್ಲ?
ಯಾಕೆಂದರೆ ಇದು "ಗುಪ್ತವಾಗಿದೆ".
ಇಂದು ನಾವು ಈ ವ್ಯವಸ್ಥೆಯನ್ನು ಕಂಡುಹಿಡಿಯುವದರೊಂದಿಗೆ, ಅದರ ಬಗ್ಗೆ ವಿವರಣೆಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸೋಣ.
**ದಾನಿಯೇಲನು 7:20–22**
"........ವಿಲಕ್ಷಣವಾಗಿ ಅತಿ ಭಯಂಕರವಾದ..........ಬಾಯಿಂದ ಬಡಾಯಿಕೊಚ್ಚಿಕೊಳ್ಳುತ್ತಾ.........."
ಇಲ್ಲಿ ತಿಳಿಸಲಾಗಿರುವ ದೇವಭಕ್ತರು ಎಂಬುವವರು ಕ್ರಿಸ್ತನ ಹಿಂಬಾಲಕರಾಗಿ ಒಡಂಬಡಿಕೆಯನ್ನು ಮಾಡಿಕೊಂಡಿರುವವರನ್ನು ಸೂಚಿಸುತ್ತದೆ. ಇದರ ಬಗ್ಗೆ ಹೀಗೆ ಓದುತ್ತೇವೆ.
**ಕೀರ್ತನೆಗಳು 50:5 –** "ನನ್ನೊಡನೆ ಯಜ್ಞದ ಮೂಲಕ ಒಡಂಬಡಿಕೆಯನ್ನು ಮಾಡಿಕೊಂಡ ನನ್ನ ಭಕ್ತರನ್ನು ನನ್ನ ಬಳಿಗೆ ಕರಕೊಂಡು ಬನ್ನಿರಿ...."
ಹೌದು! ಈ ನಂಬಿಗಸ್ತರ ಬಗ್ಗೆ ಅಪೋಸ್ತಲರ ಪತ್ರಿಕೆಗಳ ಆರಂಭದಲ್ಲೇ ಸೂಚಿಸಿರುವುದನ್ನು ಕಾಣುತ್ತೇವೆ.
ಇವರು ಯೇಸುವಿನ ನಿಜವಾದ ಹಿಂಬಾಲಕರಾಗಿದ್ದು ಮತ್ತು ಶಿಷ್ಯರಾಗಿದ್ದಾರೆ.
ಹಾಗಾದರೆ ಈ ಕೊಂಬು ಯಾರು ಅಥವಾ ಏನು?
**ದಾನಿಯೇಲನು 7:7,8**
"ನಾನು ರಾತ್ರಿ ಕಂಡ ಕನಸಿನಲ್ಲಿ ಸ್ವಲ್ಪ ಹೊತ್ತಿನ ಮೇಲೆ ಆಹಾ, ನಾಲ್ಕನೆಯ.......ಬಡಾಯಿಕೊಚ್ಚಿಕೊಳ್ಳುವ ಬಾಯಿಯೂ

ಇದ್ದವು."
ಹೌದು! ಈ ಕೊಂಬು ನಾಲ್ಕನೆಯ ಮೃಗದ ಮೇಲೆ ಮೊಳೆತು, ಮುಂಚಿನ ಕೊಂಬುಗಳಲ್ಲಿ ಮೂರು ಬೇರು ಸಹಿತ ಕೀಳಲ್ಪಟ್ಟವು ಎಂಬುದನ್ನು ಓದುತ್ತೇವೆ.
ಇವುಗಳೆಲ್ಲವು ಏನನ್ನು ಅರ್ಥೈಸುತ್ತದೆ?
ನಾವು ಈಗಾಗಲೇ ತರಗತಿ ಸಂಖ್ಯೆ 8ರಲ್ಲಿ ಅಧ್ಯಯನ ಮಾಡಿರುವಂತೆ (ಪ್ರಪಂಚದ ಐದನೆಯ ಅರಸಾಳ್ವಿಕೆ) ಈ ನಾಲ್ಕನೆಯ ಮೃಗವು ರೋಮನ್ ಸಾಮ್ರಾಜ್ಯವನ್ನು ಸೂಚಿಸುತ್ತದೆ ಎಂಬುದನ್ನು ತಿಳಿದುಕೊಂಡಿದ್ದೇವೆ. ಜಗತ್ತನ್ನು ಆಳಿದ ನಾಲ್ಕನೆಯ ಸಾಮ್ರಾಜ್ಯ.
ಈ ಕೊಂಬುಗಳು ಏನು?
**ದಾನಿಯೇಲನು 7:24**
"ಆ ಹತ್ತು ಕೊಂಬುಗಳ ವಿಷಯವೇನೆಂದರೆ, ಆ ರಾಜ್ಯದಲ್ಲಿ ಹತ್ತು ಮಂದಿ ಅರಸರು.........ಮೂವರು ಅರಸರನ್ನು ಅದುಮಿಬಿಡುವನು."
ಹೌದು! ಅವುಗಳು ರೋಮನ್ ಸಾಮ್ರಾಜ್ಯದ ಒಳಗಡೆಯೇ ಇದ್ದ ಉಪಭಾಗ ರಾಜ್ಯಗಳು ಮತ್ತು ಅರಸರನ್ನು ಸೂಚಿಸುತ್ತದೆ.
ಮತ್ತು ಈ ಚಿಕ್ಕ ಕೊಂಬು ಏನನ್ನು ಸೂಚಿಸುತ್ತದೆ?
ಈ ಚಿಕ್ಕ ಕೊಂಬು ಕೂಡ ಅರಸನಾಗಿದ್ದು, ಆದರೆ "ಮುಂಚಿನ ಎಲ್ಲದಕ್ಕಿಂತ ವಿಲಕ್ಷಣವಾಗಿ"ರುತ್ತದೆ.
ಈ ಅರಸನು ಯಾರು?
ಈ ಚಿಕ್ಕ ಕೊಂಬು ಉಪಭಾಗವಾಗಿರುವ ರಾಜ್ಯ ಅಥವಾ ರೋಮನ್ ಸಾಮ್ರಾಜ್ಯದಲ್ಲಿಯೇ ಅರಸನಾಗಿರುವುದನ್ನು ಸೂಚಿಸುತ್ತದೆ.
ಆದರೆ ಅವನು ಬೇರೆ ಎಲ್ಲಾದಕ್ಕಿಂತ ವಿಲಕ್ಷಣವೆಂಬುದಾಗಿ ವರ್ಣಿಸಲಾಗಿದೆ.
ರೋಮನ್ ಸಾಮ್ರಾಜ್ಯದ ಇತಿಹಾಸವನ್ನು ಅಧ್ಯಯನ ಮಾಡುವಾಗ ಈ ವಿಲಕ್ಷಣವಾಗಿರುವ ಅರಸನನ್ನು ಗುರುತಿಸಬಹುದು.
ಹೌದು! ಅವನು ಕ್ರಿಸ್ತಿಯ ಸಭೆಯಿಂದ ಬಂದವನಾಗಿದ್ದಾನೆ.
ಈ ವಿಷಯವನ್ನು ಇನ್ನೂ ಸ್ಪಷ್ಟವಾಗಿ ತಿಳಿದುಕೊಳ್ಳೋಣ.
ದೇವರು ಅಪೋಸ್ತಲರ ಮುಖಾಂತರ ಸಭೆಯಲ್ಲಿ ಏರ್ಪಡಿಸಿದ ಆಡಳಿತ ರಚನೆಯ ಪ್ರಕಾರ ಸೇವೆಯಲ್ಲಿರುವ ಅತೀ ಉನ್ನತವಾದ ಸಭಾಧ್ಯಕ್ಷನಿಗೆ ಸೇರಿದ್ದಾಗಿದೆ.
**1 ತಿಮೊಥೆಯನಿಗೆ 3:1**
"ಸಭಾಧ್ಯಕ್ಷನ ಉದ್ಯೋಗವನ್ನು ಪಡಕೊಳ್ಳಬೇಕೆಂದಿರುವವನು ಒಳ್ಳೇ ಕೆಲಸವನ್ನು ಅಪೇಕ್ಷಿಸುವವನಾಗಿದ್ದಾನೆಂಬ ಮಾತು ನಂಬತಕ್ಕದ್ದಾಗಿದೆ."
ಈ ಸಭಾಧ್ಯಕ್ಷರು ಸಭೆಗೆ ಸೇರಿದ ಅನೇಕ ಚಿಕ್ಕ ಗುಂಪುಗಳನ್ನು ಮುನ್ನಡೆಸುವ ಹೊಣೆ ಹೊಂದಿದ್ದ ಹಿರಿಯರಿಗೆ ಮೇಲ್ವಿಚಾರಕರಾಗಿದ್ದು, ಅವರಿಗೆ ಮಾರ್ಗದರ್ಶನ ಹಾಗೂ ಸಲಹೆಗಳನ್ನು ನೀಡುತ್ತಿದ್ದರು."
ಎಲ್ಲಾ ಅಪೋಸ್ತಲರು ಸಭಾಧ್ಯಕ್ಷರಾಗಿದ್ದರು.
ಈ ಸಭಾಧ್ಯಕ್ಷರು ಸತತವಾಗಿ ಪ್ರಯಾಣ ಮಾಡುವುದರ ಮೂಲಕ ಅನೇಕ ಸ್ಥಳಗಳಿಗೆ ಭೇಟಿ ನೀಡುವುದು ಮಾತ್ರವಲ್ಲದೆ ಅವರವರ ಪ್ರದೇಶಗಳಲ್ಲಿ ಇರುವ ಸಭೆಗಳ ಸೇವೆಯನ್ನು ಮಾಡುತ್ತಿದ್ದರು.
ಆದರೆ ಕಾಲದಿಂದ ಕಾಲಕ್ಕೆ ಎಲ್ಲಾ ಸ್ಥಳಗಳಲ್ಲಿರುವ ಸಭಾಧ್ಯಕ್ಷರು ಒಂದೆಡೆ ಸೇರಿ ಎಲ್ಲಾ ವಿಚಾರಗಳನ್ನೂ ಚರ್ಚೆ ಮಾಡುವುದು ಮಾತ್ರವಲ್ಲದೆ ಯೇಸು ಕ್ರಿಸ್ತನ ಸಭೆಯ ಕ್ಷೇಮಾಭಿವೃದ್ಧಿಗಾಗಿ ಶ್ರಮಿಸುತ್ತಿದ್ದರು.
ಹೀಗೆ ಅನೇಕ ಪಟ್ಟಣಗಳಲ್ಲಿ ಸಭಾಧ್ಯಕ್ಷರು ಇದ್ದರು.
ಆದರೆ ರೋಮರ ಸಭಾಧ್ಯಕ್ಷನು ಇದಕ್ಕಿಂತ ವ್ಯತ್ಯಾಸವಾಗಿದ್ದನು.
ಅವನು ಇಡೀ ಜಗತ್ತಿಗೆ ಪ್ರಧಾನನಾಗಿದ್ದನು.
ಇವನ ಸಾಧನದ ಮೂಲಕವೇ, ಚಕ್ರವರ್ತಿ ಕಾನ್ಸ್ಟಂಟೈನ್ ಕೂಡ ಮತಾಂತರ ಹೊಂದಿದನು. ಈ ಚಕ್ರವರ್ತಿಯನ್ನು ರೋಮನ್ ಕ್ಯಾಥೊಲಿಕ್ ಸಭೆಯವರು ಈಗಲೂ ಕೂಡ ಸಂತನೆಂದು ಪೂಜಿಸುತ್ತಾರೆ.
ಈಗ ಕಾನ್ಸ್ಟಂಟೈನ್ ಮತಾಂತರದ ನಂತರ ರೋಮ್ ಸಭಾಧ್ಯಕ್ಷನು ರೋಮ್ ಸಾಮ್ರಾಜ್ಯದಿಂದ ಅನೇಕ ಘನತೆ,

ಗೌರವ ಹಾಗೂ ಸನ್ಮಾನಗಳನ್ನೂ ಪಡೆಯಲು ಪ್ರಾರಂಭಿಸಿದರು.
ಇದರ ಪರಿಣಾಮವಾಗಿ ರೋಮ್ ಸಭಾಧ್ಯಕ್ಷನು ಇತರ ಸಭಾಧ್ಯಕ್ಷರೊಂದಿಗೆ ಭೇಟಿ ಮಾಡುವಾಗ ಕ್ರಮೇಣವಾಗಿ ಅವನಿಗೆ ಸಭೆಯ ಇತರ ಎಲ್ಲಾ ಸಭಾಧ್ಯಕ್ಷರಿಗಿಂತ ಅಧಿಕ ಗೌರವ ಹಾಗೂ ಸ್ಥಾನವನ್ನು ಕೊಡಲು ಆರಂಭವಾಯಿತು. ಅವನು ತಂದೆ ಎಂದು ಕರೆಯುವ ಬಿರುದನ್ನು ಸಾಧಿಸಿಕೊಂಡನು. ಲ್ಯಾಟಿನ್ ಭಾಷೆಯಲ್ಲಿ "ಅಪ್ಪ" ಎಂಬ ಪದ.
ಹೌದು! ಆಂಗ್ಲಭಾಷೆಯಲ್ಲಿ ಈ ಬಿರುದನ್ನು ಜನಪ್ರಿಯವಾಗಿ "ಪೋಪ್" ಎಂದು ಕರೆಯಲ್ಪಡುತ್ತದೆ.
ಈ ಬಿರುದು ಮತ್ತು ಸಭೆಯಲ್ಲಿ ಅವನು ಸಾಧಿಸಿರುವ ಪರಮಾಧಿಕಾರವು ಸತ್ಯವೇದಕ್ಕೆ ಸಂಪೂರ್ಣವಾಗಿ ವಿರೋಧವಾಗಿದೆ.

**ಎಫೆಸದವರಿಗೆ 1:22**

"ಆತನು ಸಮಸ್ತವನ್ನು ಕ್ರಿಸ್ತನ ಪಾದದ ಕೆಳಗೆ ಹಾಕಿದನು. ಇದಲ್ಲದೆ ಆತನನ್ನು ಎಲ್ಲಾದರ ಮೇಲೆ ಇರಿಸಿ ಸಭೆಗೆ ಶಿರಸ್ಸಾಗಿ ನೇಮಿಸಿದನು."
ಇದು ದೇವರು ಯೇಸುಕ್ರಿಸ್ತನನ್ನು ಸಭೆಯ ಶಿರಸ್ಸಾಗಿ ನೇಮಿಸುವುದಕ್ಕೆ ಅನ್ವಯಿಸುತ್ತದೆ.

**ಮತ್ತಾಯ 23:8,9**

"ಆದರೆ ನೀವು ಬೋಧಕರೆನ್ನಿಸಿಕೊಳ್ಳಬೇಡಿರಿ; ಒಬ್ಬನೇ ನಿಮ್ಮ ಬೋಧಕನು, ನೀವೆಲ್ಲರು ಸಹೋದರರು, ಇದಲ್ಲದೆ ಭೂಲೋಕದಲ್ಲಿ ಯಾರನ್ನೂ ನಮ್ಮ ತಂದೆ ಎಂದು ಕರೆಯಬೇಡಿರಿ; ಪರಲೋಕದಲ್ಲಿರುವಾತನೇ ನಿಮಗೆ ತಂದೆ."
ಪುನಃ ನೋಡುವಂತೆ "ತಂದೆ ಎಂಬ ಬಿರುದಿನಿಂದ ಕರೆಯಬಾರದೆಂದು ಹೇಳಲಾಗಿದೆ.
ಆದರೆ ಕ್ರಮೇಣವಾಗಿ "ಪೋಪ್" ಎಂಬ ಬಿರುದನ್ನು ತದನಂತರ ಬಂದ ರೋಮ್ ಸಭಾಧ್ಯಕ್ಷರು ಕೂಡ ತಮ್ಮದಾನಿಸಿಕೊಂಡು ಕೇವಲ ಧಾರ್ಮಿಕ ವಿಷಯವಾದ ಅಧಿಕಾರ ಹಾಗೂ ಪ್ರಭಾವದಲ್ಲಿ ಬಲಶಾಲಿಗಳಾಗದೆ ರಾಜಕೀಯವಾಗಿಯೂ ಹಕ್ಕನ್ನು ಸಾಧಿಸಿದರು.
ಹೀಗೆ ಧಾರ್ಮಿಕ ಹಾಗೂ ರಾಜಕೀಯ ಅಧಿಪತ್ಯವನ್ನು ಹೊಂದಿರುವುದರಿಂದ ಈ ಚಿಕ್ಕ ಕೊಂಬು ಬೇರೆ ಎಲ್ಲಾ ರೋಮನ್ ಚಕ್ರವರ್ತಿಗಳು ಹಾಗೂ ಸಾಮ್ರಾಜ್ಯಗಳಿಗಿಂತ ವಿಲಕ್ಷಣವಾಗಿರುವಂತೆ ಕಂಡುಬಂದಿತು. ಪೋಪನ ಉಗಮದ ಬಗ್ಗೆ ಸತ್ಯವೇದದಲ್ಲಿ ತಿಳಿಸಲಾಗಿರುವ ವಿಷಯವನ್ನೂ ಹೀಗೆ ಕಾಣುತ್ತೇವೆ.
**ದಾನಿಯೇಲನು 7:8** – "ಇಗೋ, ಅವುಗಳ ನಡುವೆ ಇನ್ನೊಂದು ಚಿಕ್ಕ ಕೊಂಬು ಮೊಳೆಯಿತು; ಅದರ ದೆಸೆಯಿಂದ ಮುಂಚಿನ ಕೊಂಬುಗಳಲ್ಲಿ ಮೂರು ಬೇರು ಸಹಿತ ಕೀಳಲ್ಪಟ್ಟವು...."
ಇಲ್ಲಿ ವಿಶೇಷವಾಗಿ ಗಮನಿಸಬೇಕಾದ ಪದವೆಂದರೆ "ಮುಂಚಿನ ಕೊಂಬುಗಳು"
ಹೌದು! ಇದು ಪೋಪನ ಉಗಮದ ಕಾಲವನ್ನು ಸೂಚಿಸುವ ಕೀಲಿಕೈ ಆಗಿದೆ ಮತ್ತು ಮೂರು ಕೊಂಬುಗಳು ಎಂಬುದು ಪೋಪನ ಉಗಮಕ್ಕಿಂತ ಮುಂಚೆ ಇದ್ದ ಮೂರು ಸಾಮ್ರಾಜ್ಯಗಳ ಅಧಿಕಾರವು ಕೊನೆಗೊಳ್ಳುವುದನ್ನೂ ತೋರಿಸುತ್ತದೆ.
ಈ ವಿಷಯವನ್ನೂ ಅಧ್ಯಯದ ಸ್ವಲ್ಪ ಆಮೇಲೆ ಕಂಡುಹಿಡಿಯೋಣ.
ಆದರೆ ನಾವು ಇತಿಹಾಸದಲ್ಲಿ ನೋಡುವ ಪ್ರಕಾರ, ಪೋಪರು ಅದರಲ್ಲಿ ವಿಶೇಷವಾಗಿ ಪೋಪ್ ಲಿಯೋ ಎಂಬುವವನು ಫ್ರಾನ್ಸ್ ದೇಶದ ಚಕ್ರವರ್ತಿಯಾದ ಪೆಪಿನ್ ಹಾಗೂ ಅವನ ಪುತ್ರ ಚಾರ್ಲ್ಮಗ್ನೆ ಎಂಬುವವರ ಜೊತೆ ಸೇರಿ "ಪವಿತ್ರ ರೋಮನ ಸಾಮ್ರಾಜ್ಯ"ವನ್ನು ಸ್ಥಾಪಿಸುವುದಕ್ಕೆ ಒಪ್ಪಂದವನ್ನು ಮಾಡಿಕೊಂಡನು.
ಇಲ್ಲಿ "ಪವಿತ್ರ" ಎಂಬುವುದು ದೈವೀಕವಾಗಿ ದೀಕ್ಷೆಕೊಡಲ್ಪಟ್ಟ ಎಂಬ ಅರ್ಥವನ್ನು ಅನ್ವಯಿಸುವಂತೆ ಹೇಳಿಕೊಳ್ಳಲಾಗಿದೆ. ಇದು ಜಾರಿಗೆ ಬಂದದ್ದು ಕ್ರಿ.ಶ.799ರಲ್ಲಿ ಈ ಕಾಲದಿಂದ ಪೋಪರ ಆಳ್ವಿಕೆಯು ಸಂಪೂರ್ಣವಾಗಿ ಗರಿಗೆದರಿ ಸಿಂಹಾಸನದ ಅಧಿಪತಿಗಳಾಗಿ ಅಸ್ತಿತ್ವಕ್ಕೆ ಬಂದರು.
ಹೌದು! ಈಗ ನಾವು ಪೋಪನು "ನಕಲು ಕ್ರಿಸ್ತ"ನ ವ್ಯವಸ್ಥೆ ಅಥವಾ ಸತ್ಯವೇದದ ಕ್ರಿಸ್ತವಿರೋಧಿ ಎಂಬುದನ್ನು ಕಂಡುಹಿಡಿದಿದ್ದೇವೆ.
ಆದರೆ ಎಲ್ಲಾ ರೋಮನ್ ಕ್ಯಾಥೋಲಿಕರು ಕ್ರಿಸ್ತವಿರೋಧಿಗಳು ಎಂಬುದನ್ನು ಯೋಚಿಸುವುದರ ಮೂಲಕ ನಾವು ತಪ್ಪು ಮಾಡಬಾರದು.
ಇಲ್ಲ! ಇಲ್ಲಿ ತಿಳಿಸಲಾಗಿರುವುದು ವ್ಯವಸ್ಥೆಯ ಬಗ್ಗೆ ಮಾತ್ರ. ಮತ್ತು ನಿಸ್ಸಾಹಕವಾಗಿ ಇದರ ಭಾಗವಾಗಿರುವ ವ್ಯಯುಕ್ತಿಕ ವ್ಯಕ್ತಿಗಳನ್ನು ಅಲ್ಲ. ಪೋಪನು ಕ್ರಿಸ್ತವಿರೋಧಿ ಎಂಬುವುದನ್ನು ಗುರುತು ಹಚ್ಚಿರುವ ವಿಷಯವನ್ನು ಸತ್ಯವೇದದ ಮೂಲಕ ಧೃಢಪಡಿಸಿಕೊಳ್ಳೋಣ.

**ದಾನಿಯೇಲನು 7:25**
"ಪರಾತ್ಪರನಿಗೆ ವಿರುದ್ಧವಾಗಿ ಕೊಚ್ಚಿಕೊಂಡು ಪರಾತ್ಪರನ ಭಕ್ತರನ್ನು ಸವೆಯಿಸಿ ಕಟ್ಟಳೆಯ ಕಾಲಗಳನ್ನೂ ಧರ್ಮವಿಧಿಗಳನ್ನೂ ಮಾರ್ಪಡಿಸಲು ಮನಸ್ಸು ಮಾಡುವವು....."

1. ಇಲ್ಲಿ ತಿಳಿಸಲಾಗಿರುವ "ಪರಾತ್ಪರನಿಗೆ ವಿರುದ್ಧವಾಗಿ ಕೊಚ್ಚಿಕೊಳ್ಳು"ವುದು ಎಂಬುದರ ಅರ್ಥವೇನು?
ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ ದೇವರಿಗೆ ವಿರುದ್ಧವಾಗಿ ಬಡಾಯಿಕೊಚ್ಚಿಕೊಳ್ಳುವುದಾಗಿದೆ!!
ಇದು ಹೇಗೆ ನಡೆಯಿತು?
ಪೋಪನು ಶ್ರೇಷ್ಠ ಬಿರುದುಗಳಿಂದ ದೈವೀಕವಗಿ ದೀಕ್ಷೆಮಾಡಲ್ಪಟ್ಟಿರುವುದಾಗಿ ಹೇಳಿಕೊಂಡು ಆ ಬಿರುದುಗಳನ್ನು ತಮಗೇ ಅನ್ವಯಿಸಿಕೊಳ್ಳುವುದರ ಮೂಲಕ ಅವುಗಳನ್ನು ದುರುಪಯೋಗಪಡಿಸಿಕೊಂಡು, ಕಾರ್ಯಪ್ರಗತಿಯಲ್ಲಿ ಸತ್ಯವನ್ನು ಮತ್ತು ದೇವರನ್ನು ತಪ್ಪಾಗಿ ನಿರೂಪಿಸುವುದರೊಂದಿಗೆ ಇದು ನಡೆಯಿತು.
ಈ ಬಿರುದುಗಳು ದೇವದೂಷಣೆ ಮಾಡುವಂಥಹವುಗಳಾಗಿವೆ.
ದೇವದೂಷಣೆ ಮಾಡುವಂಥಹ ಒಟ್ಟು 62 ಬಿರುದುಗಳನ್ನು ಬಳಸಲಾಗಿದೆ. ಇದರಲ್ಲಿ ಕೆಲವೊಂದು ಹೀಗಿವೆ....
– ಸಮಸ್ತ ಗುರುಗಳ ದೈವೀಕ ಗುರು
ಈ ಬಿರುದನ್ನು ತಾವು ನಾಯಕರು ಎಂಬುದಾಗಿ ದೈವೀಕವಾಗಿ ದೀಕ್ಷೆಮಾಡಲ್ಪಟ್ಟಿರುವುದಾಗಿ ಹೇಳಿಕೊಳ್ಳುವುದರ ಮೂಲಕ ತಪ್ಪಾಗಿ ನಾಮಕರಣ ಮಾಡಲಾಗಿದೆ.
– ತಂದೆಗಳ ಪವಿತ್ರ ತಂದೆ
ತಮ್ಮನ್ನು "ತಂದೆ" ಎಂದು ಸಂಭೋದಿಸುವ ದೈವೀಕ ಹಕ್ಕು ಪಡೆದಿದ್ದೇವೆ ಎಂಬ ಇನ್ನೊಂದು ತಪ್ಪು ಅಭಿಪ್ರಾಯ.
– ಕ್ರೈಸ್ತ ಧರ್ಮದ ಮೇಲ್ವಿಚಾರಕ
– ತೈಲದಿಂದ ಲೇಪಿಸಿ ಲೇಪಿಸಲ್ಪಟ್ಟ ಕ್ರಿಸ್ತನು
– ಮೋಶೆಯು ಅಧಿಕಾರದಲ್ಲಿರುವುದು
ಮೋಶೆಯು ಇಸ್ರಾಯೇಲ್ಯರ ಮೇಲೆ ಅಧಿಕಾರ ನಡೆಸಿದಂತೆ ಇವರಿಗೂ ಕೂಡ ದೇವ ಜನರ ಮೇಲೆ ದೈವೀಕ ಅಧಿಕಾರವಿದೆ ಎಂಬ ತಪ್ಪಾದ ಹಕ್ಕನ್ನು ಸಾಧಿಸಿರುವುದು.
– ಮೆಲ್ಕಿಜ಼ದೇಕನ ಕ್ರಮದವನು.
ಈ ಬಿರುದು ರಾಜವೈಭದ ಮಹಾಯಾಜಕನಾದ ಯೇಸುಕ್ರಿಸ್ತನಿಗೆ ಮಾತ್ರ ಅನ್ವಯವಾಗುತ್ತದೆ. ಹೀಗೆ ಪೋಪನು ಯಾಜಕರುಗಳಾಗಿ ಸಿಂಹಾಸನರೂಡರಾಗಿರುವಂತೆ ಹೇಳಿಕೊಳ್ಳುತ್ತಾರೆ.
– ಅಪೋಸ್ತಲರ ಉತ್ತರಾಧಿಕಾರಿ – ಪೇತ್ರನು ಅಧಿಕಾರದಲ್ಲಿರುವುದು.
ಇನ್ನೊಂದು ದೇವದೂಷಣೆಯ ಬಿರುದು. ಇದರ ಮೂಲಕ ಹೇಳಿಕೊಳ್ಳುವುದೇನೆಂದರೆ, ಯೇಸುಕ್ರಿಸ್ತನು ಪೇತ್ರನನ್ನು ಅಪೋಸ್ತಲರ ಮತ್ತು ಸಭೆಯ ನಾಯಕನನ್ನಾಗಿ ನೇಮಿಸಿದರು, ಮತ್ತು ಪೋಪರು ಕೂಡ ಆ ಕ್ರಮದಲ್ಲಿ ಬರುವುದರಿಂದ ಪೇತ್ರನ ಪದವಿಗೆ ಪಾತ್ರರಾಗಿದ್ದಾರೆ.
– ದೇವರ ನಿವಾಸದ ಅಧಿಪತಿ
ಈ ಬಿರುದೂ ಕೂಡ ಸಭೆಯ ಅಧಿಪತಿಯಾಗಿರುವ ಕ್ರಿಸ್ತನಿಗೆ ಮಾತ್ರ ಅನ್ವಯವಾಗುತ್ತದೆ.
– ಸಮಸ್ತ ಪವಿತ್ರ ಸಭೆಗಳ ಶಿರಸ್ಸು ಸಭಾಧ್ಯಕ್ಷರುಗಳ ಸಭಾಧ್ಯಕ್ಷ – ಪರಮಾಧಿಕಾರಿಯುಳ್ಳ ಧರ್ಮಗುರು
ಈ ದೇಷದೂಷಣೆ ಬಿರುದಿನ ಮೂಲಕ ಹೇಳಿಕೊಳ್ಳುವುದೇನೆಂದರೆ ಪೋಪ್ ಸಭಾಧ್ಯಕ್ಷನು ಇತರ ಎಲ್ಲಾ ಸಭೆಗಳ ಸಭಾಧ್ಯಕ್ಷರ ಮೇಲೆ ಅಧಿಕಾರ ಚಲಾಯಿಸುವ ಹಕ್ಕು ಉಳ್ಳವವನಾಗಿದ್ದಾನೆ ಎಂಬುದಾಗಿದೆ.
ಈ ಪರಲೋಕರಾಜ್ಯದ ಕೀಲಿಕೈಗಳನ್ನು ಹೊಂದಿರುವವನು.
ಇದು ಪೋಪನು ಸ್ವರ್ಗದ ಹಾಗೂ ನರಕದ ಎರಡು ಕೀಲಿಕೈಗಳನ್ನು ಹೊಂದಿರುವುದಾಗಿ ಹೇಳಿಕೊಳ್ಳುವುದನ್ನು ಸೂಚಿಸುತ್ತದೆ. ಹೀಗೆ ಪೋಪನು ಆತ್ಮಗಳನ್ನು ಪರಲೋಕಕ್ಕೊ ಅಥವಾ ನರಕಕ್ಕೊ ಕಳುಹಿಸುವ ಅಧಿಕಾರವನ್ನು ಹೊಂದಿರುವುದಾಗಿ ಹೇಳಿಕೊಳ್ಳುತ್ತಾರೆ.
– ಕ್ರಿಸ್ತನ ಪ್ರತಿರೂಪ
ಪೋಪನು ಈ ಭೂಮಿಯಲ್ಲಿ ಕ್ರಿಸ್ತನ ಪ್ರತಿನಿಧಿ ಎಂಬುದಾಗಿ ಆಗಾಗ ತಪ್ಪಾಗಿ ತೋರಿಸಿಕೊಳ್ಳುವುದಾಗಿದೆ. ಇದು ಇನ್ನೊಂದು ರೀತಿಯ ದೇವದೂಷಣೆಯಾಗಿದ್ದು ಸತ್ಯವೇದದಲ್ಲಿ ಇಂಥಹ ರಚನೆಯ ಬಗ್ಗೆ ಯಾವುದೇ

ಸಾಕ್ಷ್ಯವಿಲ್ಲದಿರುವುದನ್ನು ಗಮನಿಸುತ್ತೇವೆ.
ಇವುಗಳು ಕೇವಲ ಕೆಲವು ಮಾದರಿಗಳಾಗಿದ್ದು ಹೇಗೆ ಪೋಪನು ಈ ಕೆಳಗಿನ ವಚನದಂತೆ ಇದನ್ನು ನಿರೂಪಿಸಿದನು ಎಂಬ ಕಾರ್ಯವನ್ನು ಸೂಚಿಸುತ್ತದೆ.
"....ಪರಾತ್ಪರನಿಗೆ ವಿರುದ್ಧವಾಗಿ ಕೊಚ್ಚಿಕೊಂಡು......"

2. **ದಾನಿಯೇಲನು 7:25 –** ".....ಪರಾತ್ಪರನ ಭಕ್ತರನ್ನು ಸವೆಯಿಸಿ....."
ಪೋಪನು ನೀತಿವಂತ ಕ್ರೈಸ್ತರ ಮತ್ತು ಸತ್ಯವೇದವನ್ನು ನಂಬುವ ಭಕ್ತರ ಮೇಲೆ ಎಸಗಿದ ಹಿಂಸೆಯ ಕಾರ್ಯಗಳನ್ನು ಇದು ಸೂಚಿಸುತ್ತದೆ.
ಇದರ ವಿವರಣೆಗಳನ್ನು ಆಮೇಲೆ ಧ್ಯಾನಿಸೋಣ.
**ದಾನಿಯೇಲನು 7:25 –** "......ಕಟ್ಟಳೆಯ ಕಾಲಗಳನ್ನು ಧರ್ಮವಿಧಿಗಳನ್ನು ಮಾರ್ಪಡಿಸಲು......"
ಕಾಲವನ್ನು ಮಾರ್ಪಡಿಸಿರುವುದೆಂದರೆ ಕ್ರಿಸ್ತನ ಕಾಲಕ್ಕೆ ಮುಂಚೆಯೆ ಪೋಪ್ ಅಧಿಕಾರದಲ್ಲಿ ಸಭೆಯನ್ನು ಸ್ಥಾಪಿಸಿರುವುದು. ಹಾಗೆಯೇ ಧರ್ಮವಿಧಿಗಳನ್ನು ಕೂಡ ದೇವರ ಆಜ್ಞೆಗಳನ್ನು ತಳ್ಳಿಹಾಕಿ ತಮಗೆ ಅನುಕೂಲವಾಗುವಂತೆ ಮಾರ್ಪಾಡು ಮಾಡಿಕೊಂಡಿದ್ದಾರೆ. ಇದನ್ನು ಹೀಗೆ ನಿರೂಪಿಸಬಹುದು –
**ವಿಮೋಚನಾಕಾಂಡ 20:4,5**
"ಯಾವ ಮೂರ್ತಿಯನ್ನು ಮಾಡಿಕೊಳ್ಳಬಾರದು ಆಕಾಶದಲ್ಲಾಗಲಿ ಭೂಮಿಯಲ್ಲಾಗಲಿ..... ಭೂಮಿಯ ಕೆಳಗಣ.......ಮೂರು ನಾಲ್ಕು ತಲೆಗಳವರೆಗೆ....."
ಇದು ದೇವರು ಕೊಟ್ಟ ಹತ್ತು ಆಜ್ಞೆಗಳಲ್ಲಿ ಎರಡನೆಯ ಆಜ್ಞೆಯಾಗಿದೆ. ಮತ್ತು ಅವರ ಪ್ರಮಾಣದ ಒಂದು ಭಾಗವಾಗಿದೆ.
ಆದರೆ ನಾವು ನೋಡುವಂತೆ ಪೋಪನು ಈ ಆಜ್ಞೆಯನ್ನು ತಮ್ಮ ನೀತಿಭೋದನೆಯ ಪುಸ್ತಕದಿಂದ ಸಂಪೂರ್ಣವಾಗಿ ಕಿತ್ತುಹಾಕಿರುವುದನ್ನೂ ಗಮನಿಸುತ್ತದೆ.
ಹೀಗೆ ರೋಮನ್ ಕ್ಯಾಥೋಲಿಕರು ದೇವರ ಇಷ್ಟು ಪ್ರಮುಖವಾದ ಆಜ್ಞೆಯ ಅರಿವಿಲ್ಲದೇ ಇದ್ದಾರೆ.
ಇದನ್ನು ಯಾಕೆ ಮಾಡಿದರು?
ಯಾಕೆಂದರೆ ವಿಗ್ರಹಾರಾಧನೆ ಹಾಗೂ ಮೂರ್ತಿಪೂಜೆಯ ವಿರುದ್ಧ ದೇವರು ಕೊಟ್ಟ ಕಟ್ಟುನಿಟ್ಟಿನ ಆಜ್ಞೆಯಾಗಿದೆ. ಆದರೆ ರೋಮನ್ ಕ್ಯಾಥೋಲಿಕರ ಆಲಯಗಳಲ್ಲಿ ಸ್ಪಷ್ಟವಾಗಿ ಇದನ್ನು ಕಾಣಬಹುದು.
ಈ ವಿಷಯಕ್ಕೆ ಸೇರುವಂತೆ ಇನ್ನೊಂದು ವಿಷಯವಿದೆ.
ರೋಮನ್ ಕ್ಯಾಥೊಲಿಕರ ನೀತಿ ಭೋಧನೆಯ ಪುಸ್ತಕದಲ್ಲಿ ಹತ್ತು ಆಜ್ಞೆಗಳ ಪಟ್ಟಿ ಮಾಡಲಾಗಿದೆ!
ಇದು ಹೇಗೆ ಎಂಬುದನ್ನು ನೀವು ಯೋಚಿಸಬಹುದು!
ಅವುಗಳಿಂದ ಒಂದನ್ನು ತೆಗೆದರೆ ಒಂಭತ್ತು ಮಾತ್ರ ಉಳಿಯುತ್ತದೆ.
ಆದರೆ ಇಲ್ಲಿ ಹತ್ತು ಆಜ್ಞೆಗಳಿವೆ! ಇದು ಹೇಗೆ ಸಾಧ್ಯ
ಬಲು ನಿಪುಣತೆಯ ಕೈಚಳಕದಿಂದ ಹತ್ತನೆಯ ಆಜ್ಞೆಯನ್ನು ಎರಡಾಗಿ ವಿಂಗಡಸುವುದರ ಮೂಲಕ ಒಂಭತ್ತು ಇದ್ದ ಆಜ್ಞೆಗಳನ್ನು ಹತ್ತಾಗಿ ಪರಿವರ್ತಿಸಲಾಗಿದೆ.
ದೇವರು ಕೊಟ್ಟ ಹತ್ತನೆಯ ಆಜ್ಞೆ ಹೀಗಿದೆ.
**ವಿಮೋಚನಾಕಾಂಡ 20:17**
"ಮತ್ತೊಬ್ಬನ ಮನೆಯನ್ನು ಆಶಿಸಬಾರದು; ಮತ್ತೊಬ್ಬನ ಹೆಂಡತಿ ಗಂಡಾಳು ಹೆಣ್ಣಾಳು ಎತ್ತು ಕತ್ತೆ ಮುಂತಾದ ಯಾವುದನ್ನೂ ಆಶಿಸಬಾರದು."
ಹೌದು! ಈ ಆಜ್ಞೆಯಲ್ಲಿರುವ "ಮತ್ತೊಬ್ಬನ ಹೆಂಡತಿಯನ್ನು ಆಶಿಸಬಾರದು" ಎಂಬುದನ್ನು ಒಂಭತ್ತನೆಯ ಆಜ್ಞೆಯಾಗಿಯೂ, ಇನ್ನುಳಿದ ಭಾಗವನ್ನು ಹತ್ತನೆಯ ಆಜ್ಞೆಯಾಗಿ ಮಾಡಲಾಗಿದೆ.
ನಿಜವಾಗಿಯೂ, ಪೋಪನು "ಕಟ್ಟಳೆಯ ಕಾಲಗಳನ್ನೂ ಧರ್ಮವಿಧಿಗಳನ್ನೂ ಮಾರ್ಪಡಿಸಲು....." ಪ್ರಯತ್ನದಲ್ಲಿ ಸಫಲವಾಯಿತು.
ಇದು ನಾವು "ಕಾಲಗಳನ್ನು ಮಾರ್ಪಡಿಸುವ" ವಿಷಯವನ್ನು ನೋಡೋಣ....
**ಪ್ರಕಟನೆ 20:5**

"ಮಿಕ್ಕ ಸತ್ತವರು ಆ ಸಾವಿರ ವರುಷ ತೀರುವ ತನಕ ಜೀವಿತರಾಗಿ ಏಳಲಿಲ್ಲ ಇದೇ ಪ್ರಥಮ ಪುನರುತ್ಥಾನವು"
ಇದು ದೇವರ ದೈವೀಕ ಯುಗಗಳ ಯೋಜನೆಯಲ್ಲಿ ಅತ್ಯಂತ ಶ್ರೇಷ್ಠವಾದ ಕಾಲಕ್ಕೆ ಅನ್ವಯಿಸುತ್ತದೆ.
ಇದನ್ನು ಮನುಷ್ಯನಿಗಾಗಿ "ಚಿನ್ನದ ಯುಗ" ಎಂಬುದಾಗಿ ಕರೆಯಲ್ಪಡುತ್ತದೆ.
ಈ ಚಿನ್ನದ ಯುಗದಲ್ಲಿ ಕ್ರಿಸ್ತನ ಸಾವಿರ ಯುಗದ ಆಳ್ವಿಕೆಯಾಗಿದೆ!
ಈ ರಾಜ್ಯಕ್ಕಾಗಿಯೇ ಎಲ್ಲಾ ಕ್ರೈಸ್ತರು ಬೇಡುತ್ತಾರೆ.
"ನಿಮ್ಮ ರಾಜ್ಯವು ಬರಲಿ ನಿಮ್ಮ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ" – **ಮತ್ತಾಯ 6:10**

ಹೌದು! ಈ ರಾಜ್ಯದ ಬಗ್ಗೆ ಸ್ವಲ್ಪ ವಿಷಯಗಳು ಮಾತ್ರ ಸಾಮಾನ್ಯವಾಗಿ ತಿಳಿದಿದೆ.
ಸಾವಿರ ವರ್ಷದ ಆಳ್ವಿಕೆಯ ಬಗ್ಗೆ ಸತ್ಯವೇದದಲ್ಲಿ ಎರಡು ವಚನಗಳಲ್ಲಿಮಾತ್ರ ತಿಳಿಸಲಾಗಿದ್ದು ಇವೆರಡೂ ವಚನಗಳ ಕೊನೆಯ ಪುಸ್ತಕದಲ್ಲಿವೆ.
ಪ್ರಕಟನೆ 20:4 ಮತ್ತು 6!!
ಆದರೆ ಪೋಪನು ತಮ್ಮ "ಪವಿತ್ರ ರೋಮನ್ ಸಾಮ್ರಾಜ್ಯ"ವನ್ನು ಸ್ಥಾಪಿಸುವಾಗ ಈ ಕ್ರಿಸ್ತನ ಸಾವಿರ ವರ್ಷದ ಆಳ್ವಿಕೆಯು ಪ್ರಾರಂಭವಾಯಿತು ಎಂಬುದಾಗಿ ಹೇಳಿಕೊಂಡರು.
ಮತ್ತು ಅವರು ಕ್ರಿಸ್ತನಿಗಾಗಿ ಹಾಗೂ ಕ್ರಿಸ್ತನ ಪರವಾಗಿ ಆಳ್ವಿಕೆ ನಡೆಸುವರು ಎಂಬುದಾಗಿ ಹೇಳಿಕೊಂಡರು!
ಹೀಗೆ ಕ್ರಿ.ಶ 799 ರಿಂದ ಕ್ರಿ.ಶ 1799ರವರೆಗೆ ಈ ಪವಿತ್ರ ರೋಮನ್ ಸಾಮ್ರಾಜ್ಯವು ಕ್ರಿಸ್ತನ ಸಾವಿರ ವರ್ಷದ ಆಳ್ವಿಕೆಯಾಗಿದೆ ಎಂದು ಸಾಮಾನ್ಯವಾಗಿ ಪೋಪರು ಅಭಿಪ್ರಾಯಪಟ್ಟಿದ್ದಾರೆ.
ಹೌದು! ಸಭೆಯನ್ನು ಕ್ರಿಸ್ತನ ರಾಜ್ಯಾಧಿಕಾರದ ಸಮಯಕ್ಕೆ ಮೊದಲೇ ಸ್ಥಾಪಿಸಲಾಯಿತು.
ಹೌದು! ಯೇಸುಕ್ರಿಸ್ತನು ತಮ್ಮ ಮಹಿಮೆಯಲ್ಲಿ ಎರಡನೆಯ ಬರುವಿಕೆಯಲ್ಲಿ ಬಂದು ನಿಜವಾಗಿಯೂ ಭೂಮಿಯ ಮೇಲೆ ದೇವರ ರಾಜ್ಯವನ್ನು ಸ್ಥಾಪಿಸುವ ಮೊದಲೇ ಈ ಕೆಳಗಿನ ವಚನವು ನೆರವೇರುವಂತೆ ಮಾಡಲಾಯಿತು.

**ಮತ್ತಾಯ 6:10**

"ನಿಮ್ಮ ರಾಜ್ಯವು ಬರಲಿ............ಭೂಲೋಕದಲ್ಲಿಯೂ ನೆರವೇರಲಿ."
ಹೌದು! ಈ ರಾಜ್ಯದ ನಿರಿಕ್ಷೆಯು ಪೋಪರ ಸಾವಿರ ವರ್ಷದ ಆಳ್ವಿಕೆಯ ಅವಧಿಯಾದ ಕ್ರಿ.ಶ.799 ರಿಂದ ಕ್ರಿ.ಶ 1799ರಲ್ಲಿ ನೆರವೇರಿಸಿರುವುದಾಗಿ ಹೇಳಿಕೊಳ್ಳಲಾಗುತ್ತದೆ.
ಇದು ಪೋಪನ ನಕಲು ಸಾಮ್ರಾಜ್ಯವಾಗಿದ್ದು ಭೂಮಿಯ ಮೇಲೆ ಕ್ರಿಸ್ತನಂತೆ ಆಳ್ವಿಕೆ ನಡೆಸಲು ಅಧಿಕಾರವನ್ನು ಕೊಡಲಾಗಿದೆ ಮತ್ತು ದೇವರ ರಾಜ್ಯವನ್ನು ಜಗತ್ತಿನೆಲ್ಲೆಡೆ ಕ್ರಿ.ಶ 799ರಿಂದ ಕ್ರಿ.ಶ 1799ರವರೆಗೆ ಸ್ಥಾಪಿಸಿರುವುದಾಗಿ ಹೇಳಿಕೊಳ್ಳಲಾಗಿದೆ.
ಆದರೆ ನಿಜವಾಗಿಯೂ, ಕ್ರಿಸ್ತನ ಸಾವಿರ ವರ್ಷದ ಆಳ್ವಿಕೆಯ ಕಾಲವು ಮತ್ತು ರಾಜ್ಯವು ಕ್ರಿಸ್ತನ ಎರಡನೆಯ ಬರುವಿಕೆಯ ನಂತರ ಆರಂಭವಾಗುವುದಾಗಿದೆ.
ಹೌದು! ಪೋಪನು ಈ ಸಾವಿರ ವರ್ಷದ ಅಧಿಕಾರವನ್ನು ಸ್ಥಾಪಿಸುವುದರ ಮೂಲಕ ಆ ಕಾಲವು ಪ್ರಾರಂಭವಾಗಿದೆ ಎಂದು ಹಕ್ಕು ಸಾಧಿಸುವುದರೊಂದಿಗೆ "ಕಾಲವನ್ನು ಮಾರ್ಪಡಿಸುವ" ಎಂಬ ಪ್ರವಾದನೆಯ ಮಾತು ನೆರವೇರಿತು.
ಹೀಗೆ ಪೋಪರು ಕ್ರಿಸ್ತವಿರೋಧಿಯಾಗಿರುವ ವ್ಯವಸ್ಥೆಯಾಗಿದ್ದು, ಇವರಿಗೆ ರಾಜ್ಯಸ್ಥಾಪಿಸುವ ಅಧಿಕಾರ ನಡೆಸುವ ಅಧಿಕಾರವನ್ನು ನೀಡಲಾಗಿತ್ತು ಎಂಬುವುದನ್ನು ಗ್ರಹಿಸಿಕೊಳ್ಳುತ್ತೇವೆ.
ಕ್ರಿ.ಶ 1799 ರಲ್ಲಿ ಫ್ರಾನ್ಸ್ನ ಸರ್ವಾಧಿಕಾರಿಯಾದ ನೆಪೋಲಿಯನ್ ಬೋನರ್ ಪಾರ್ಟೆ ಎಂಬುವವನು ಆಗ ಅಧಿಕಾರದಲ್ಲಿದ್ದ ಪಿಯಸ್ ಎಂಬ ಪೋಪನನ್ನು ಬಂಧಿಸಿ ಒಂದು ಕಾರಾಗ್ರಹದಿಂದ ಇನ್ನೊಂದು ಕಾರಾಗ್ರಹಕ್ಕೆ ಒಂದಾದ ನಂತರ ಒಂದಾಗಿ ವರ್ಗಾಯಿಸುವಾಗ ಪೋಪನು ಪ್ರಾಣವನ್ನು ಕಳೆದುಕೊಂಡಾಗಲೇ, ಪೋಪನ ಆಳ್ವಿಕೆಯು ಅಂತ್ಯಗೊಂಡಿತು.
ಹೌದು! ಕ್ರಿ.ಶ 1799ರಲ್ಲಿ ಪೋಪನ ಅಧಿಕಾರವು ಕೊನೆಗೊಂಡಿತು.
ಹೀಗೆ ಪ್ರವಾದನೆಯಲ್ಲಿ ಹೇಳಿರುವ ಪ್ರಕಾರ 1260 ವರ್ಷಗಳಷ್ಟು ಅನುಮತಿಸಿದೆ ಆಳ್ವಿಕೆಯ ಕಾಲವು ಕೊನೆಗೊಂಡಿತು.
ಈ ಅಧಿಕಾರವು ಯಾವಾಗ ಪ್ರಾರಂಭವಾಯಿತು?
1799 ವರ್ಷಗಳಿಂದ 1260 ವರ್ಷ ಹಿಂದೆ ಹೋಗಬೇಕು!
ಇದನ್ನು ಲೆಕ್ಕಾಚಾರ ಮಾಡಿದರೆ –> 1799 – 1260 = ಕ್ರಿ.ಶ 539

ಹೌದು! ಸರಿಯಾಗಿ ಈ ವರ್ಷದಲ್ಲೇ ಪೋಪ್ ಅಧಿಕಾರದ ಉಗಮವಾಗುವುದನ್ನು ಗಮನಿಸುತ್ತೇವೆ. ಯಾಕೆಂದರೆ ಕ್ರಿ.ಶ 539ರಲ್ಲೇ ಚಕ್ರವರ್ತಿಯಾದ ಜಸ್ಟಿಸಿಯನ್ ಎಂಬುವವನು ರೋಮನ್ ಸಾಭಾಧ್ಯಾಕ್ಷರಿಗೆ ಬರೆದ ಪತ್ರದ ಪ್ರಕಾರ ಪೋಪನನ್ನು "ಪೊಂಟಿಫೆಕ್ಸ್ ಮಾಗ್ನಿಮಸ್" ಅಥವಾ "ರೋಮನ್ ಸಾಮ್ರಾಜ್ಯದಲ್ಲಿರುವ ಎಲ್ಲಾ ಧರ್ಮಗಳ ಶಿರಸ್ಸು" ಎಂದು ಆರಿಸಿಕೊಂಡನು.

ಇದು ಮಾತ್ರವಲ್ಲದೆ ಇದೇ ವರ್ಷದಲ್ಲಿ "ಮೂರು ಕೊಂಬುಗಳು ಎಂದು ಕರೆಯಲ್ಪಡುವ ಮೂರು ಸಾಮ್ರಾಜ್ಯಗಳು ಉರುಳಿದವು.

ಈ ಮೂರು ಕೊಂಬುಗಳೆಂದರೆ – ಹೆರುಲಿ(Heruli), ಈಸ್ಟರ್ನ್ ಎಕ್ಸ್ಟ್ರಾಚೇಟ್(Eastern Extrarchate) ಹಾಗೂ ಆಸ್ಟ್ರೋಗೊತಿಕ್(Ostrogothic) ಸಾಮ್ರಾಜ್ಯಗಳು

ಹೀಗೆ ಕ್ರಿಸ್ತನ ನಕಲು ವ್ಯವಸ್ಥೆಯಾಗಿರುವ ಕ್ರಿಸ್ತವಿರೋಧಿ ವ್ಯವಸ್ಥೆಯು ಪೋಪರನ್ನು ರಾಜರು ಹಾಗೂ ಶಿರಸ್ಸಾಗಿ ನೇಮಿಸಿಕೊಳ್ಳುವುದರ ಮೂಲಕ ಮಾತ್ರವಲ್ಲದೆ ದೇವದುಷಣೆಯ ಬಿರುದುಗಳನ್ನು ಇಟ್ಟುಕೊಂಡು ಕ್ರಿ.ಶ 539 ರಿಂದ ಕ್ರಿ.ಶ 1799ರವರೆಗೆ ಆಳ್ವಿಕೆ ನಡೆಸಿತು.

ಕ್ರಿಸ್ತವಿರೋಧಿಯನ್ನು ಹೇಗೆ ಸರಿಯಾಗಿ ಕಂಡುಹಿಡಿಯುತ್ತೇವೆ?

ಇದರ ಬಗ್ಗೆ ಪ್ರಮುಖವಾದ ಒಂದು ವಚನವನ್ನು ಓದೋಣ

**ಪ್ರಕಟನೆ 13:18**

"ಇದರಲ್ಲಿ ಜ್ಞಾನವು ಅಡಕವಾಗಿದೆ, ಬುದ್ಧಿವಂತನು ಆ ಮೃಗದ ಅಂಕೆಯನ್ನು ಎಣಿಸಲಿ; ಅದು ಒಬ್ಬ ಮನುಷ್ಯನನ್ನು ಸೂಚಿಸುವ ಅಂಕೆಯಾಗಿದೆ, ಅದರ ಅಂಕೆಯು ಆರುನೂರ ಅರವತ್ತಾರು."

ಮೃಗ ಎಂಬ ಪದವು ದಾನಿಯೇಲ 7ನೇ ವಚನದ ಪ್ರಕಾರವಾಗಿದೆ. ಅಲ್ಲಿ ನೋಡುವಂತೆ ನಾಲ್ಕು ಮೃಗಗಳು ಸಾಮ್ರಾಜ್ಯ ಅಥವಾ ರಾಜ್ಯವನ್ನು ಸೂಚಿಸುತ್ತದೆ.

ಆದುದರಿಂದ ಇಲ್ಲೂ ಕೂಡ "ಮೃಗ"ವೆಂದು ಸೂಚಿಸಿರುವ ಪದವು ಪೋಪ್ ವ್ಯವಸ್ಥೆಯ ಸಾಮ್ರಾಜ್ಯ ಅಥವಾ ರಾಜ್ಯಭಾರಕ್ಕೆ ಅನ್ವಯಿಸುತ್ತದೆ. ಇಲ್ಲಿ ಪೋಪರು ಅರಸನಂತೆ ಎಡೆಬಿಡದೆ ಆಳ್ವಿಕೆಯನ್ನು ನಡೆಸಿದರು.

666 ಎಂಬ ಸಂಖ್ಯೆ ಏನು?

ಇಲ್ಲಿ ನಮ್ಮ ಕರ್ತನಾದ ಯೇಸು ಕ್ರಿಸ್ತನು ಹೇಳುವ ಪ್ರಕಾರ ಇದು ಈ "ಮೃಗ" ಅಥವ ಪೋಪ್ ಸಾಮ್ರಾಜ್ಯದ ಸಂಖ್ಯೆಯಾಗಿದೆ.

ಹೇಗೆ, ಎಂದು ನೀವು ಕೇಳಬಹುದು?

ಇದು ಪೋಪರ ಪ್ರಮುಖ ಬಿರುದನ್ನು ಹೊಂದಿರುವ ಅಂಕಿಗಳ ಮೌಲ್ಯವಾಗಿದೆ.

VICARIOUS FILII DEI(ವಿಕಾರಿಯಸ್ ಫಿಲಿ ದೀ)

ಲ್ಯಾಟಿನ್ನಲ್ಲಿ ದೇವರ ಮಗನ(ಕ್ರಿಸ್ತ) ಪ್ರತಿರೂಪ ಎಂಬ ಅರ್ಥವಿದೆ.

ಈ ಬಿರುದನ್ನು ಪೋಪನ ಕಿರೀಟ ಮತ್ತು ವ್ಯಾಟಿಕನ್ ಮಹಾದ್ವಾರದ ಮೇಲೆ ಕಾಣಬಹುದು.

ಇದಕ್ಕೆ ರೋಮನ್ ಅಂಕಿಗಳ ಪ್ರಕಾರ ಈ ಕೆಳಗಿನ ಮೌಲ್ಯವಿದೆ.

V-5
I-1
C-100
A-0
R-0
I-1
U-5( U ಎಂಬುದು ಲ್ಯಾಟಿನ್ನಲ್ಲಿ V ಇದ್ದಂತೆ)
S-0
112 ಒಟ್ಟು

**F-0**
**I –1**
**L-50**

I-1
I-1
53 ಒಟ್ಟು

D-500
E-0
I-1
501 ಒಟ್ಟು

ಈ ಒಟ್ಟು ಮೊತ್ತವನ್ನು ಕೂಡಿಸಿದಾಗ ಸಿಗುವ ಸಂಖ್ಯೆಯೆಂದರೆ = 113+53+50=666!!
ಹೌದು! ವ್ಯಾಟಿಕನ್ ದ್ವಾರದ ಮೇಲೆ ಮತ್ತು ಪೋಪನ ಕಿರೀಟದಲ್ಲಿ ಬರೆದಿರುವ ಅಕ್ಷರಗಳ ಮೂಲಕವೇ ಕ್ರಿಸ್ತ ವಿರೋಧಿಯ ಸ್ಪಷ್ಟವಾದ ಗುರುತು ಸಿಗುತ್ತದೆ.
ಈಗ ನಾವು ಸತ್ಯವೇದದಲ್ಲಿ ತಿಳಿಸಲಾಗಿರುವ ಕ್ರಿಸ್ತವಿರೋಧಿ ವ್ಯವಸ್ಥೆ ಎನ್ನುವುದು ನಿಸ್ಸಂದೇಹವಾಗಿಯೂ ಪೋಪನ ಮಾರ್ಗ ಎನ್ನುವುದನ್ನು ಪತ್ತೆಹಚ್ಚಿರುವ ಕಾರ್ಯವನ್ನು ಇನ್ನೂ ಕೆಲವು ವಾಕ್ಯಗಳ ಮೂಲಕ ದೃಢಪಡಿಸಿಕೊಳ್ಳೋಣ..
**2 ಥೆಸಲೋನಿಕದವರಿಗೆ 2:3,4**
"ಯಾರೂ ಯಾವ ವಿಧದಲ್ಲಿಯೂ......... ಆ ದಿನವು ಬರುವುದಿಲ್ಲಿ."
ಇಲ್ಲಿ ಹೇಳಿರುವ ಪ್ರಾಕರ ಅರ್ಧಮ ಸ್ವರೂಪನಾದ ಕ್ರಿಸ್ತವಿರೋಧಿ ಎಂಬ ಪೋಪ್ ವ್ಯವಸ್ಥೆಯು ಪ್ರಗತಿ ಹೊಂದಿ "ಮತಭ್ರಷ್ಟಿತೆಯು ಉಂಟಾದ ನಂತರವೇ ಅಧಿಕಾರಕ್ಕೆ ಬರುವುದು.
ಮತಭ್ರಷ್ಟತೆ ಎನ್ನುವುದು ಸತ್ಯವೇದದ ನಿಜವಾದ ಜ್ಞಾನದಿಂದ ಅನೇಕ ಕ್ರೈಸ್ತರು ಬಿದ್ದುಹೋಗುವುದು. ಯಾಕೆಂದರೆ ಸತ್ಯವೇದದ ಅಧ್ಯಯನವು ಕ್ರಮೇಣವಾಗಿ ತ್ಯಜಿಸಲ್ಪಟ್ಟು "ಮತನಂಬಿಕೆ"ಗಳೆಂದು ಕರೆಯಲ್ಪಡುವ ಅಡಿಸರಿಯದ ಮೇಲೆ ವಿಶ್ವಾಸವು ಬೆಳೆಯಲಾರಂಭಿಸಿತು.
ಸತ್ಯವೇದದ ಜ್ಞಾನ ಮತ್ತು ಸತ್ಯದ ಅರಿವಿನ ನಷ್ಟದಿಂದಾಗಿ ಉಂಟಾದ ಅವಕಾಶವು ಸುಳ್ಳುಬೋಧನೆಯನ್ನು ಪರಿಚಯಿಸುವುದಕ್ಕೆ ಸುಲಭವಾಯಿತು ಮತ್ತು ನಿಧಾನವಾಗಿ ಈ ಕೆಳಗಿನ ಸುಳ್ಳು ಉಪದೇಶಗಳು ಸಭೆಯನ್ನು ಪ್ರವೇಶಿಸಿದವು.
ಮೊದಲನೆಯದಾಗಿ ಪರಿಚಯಿಸಿದ ಹಾಗೂ ಅನ್ಯಧರ್ಮದವರು ಸಾಮಾನ್ಯವಾಗಿ ನಂಬುವ ಸುಳ್ಳು ಬೋಧನೆಯೆಂದರೆ,
– > ಮರಣವಿಲ್ಲದೆ ಅಥವಾ ನಿರಂತರವಿರುವ ಮನುಷ್ಯನ ಆತ್ಮ
ಹೌದು! ಸತ್ಯವೇದದಲ್ಲಿರುವಂತ್, ಮನುಷ್ಯನೇ ಆತ್ಮ(**ಆದಿಕಾಂಡ 2:7**) ಎಂಬ ಉಪದೇಶಕ್ಕೆ ಬದಲಾಗಿ ಮನುಷ್ಯನಿಗೆ ಆತ್ಮವಿದೆ ಎಂಬುದಾಗಿ ಬೋಧಿಸಲಾಯಿತು.
ಹೀಗೆ ಮನುಷ್ಯ ಸತ್ತರೂ ಕೂಡ ಅವನ ಆಂತರಿಕ ಆತ್ಮವು ಸಾಯಲು ಸಾಧ್ಯವಿಲ್ಲ.
– > ಇನ್ನೊಂದು ಸುಳ್ಳು ಭೋದನೆಯೆಂದರೆ,
– > ನರಕವು ನಿರಂತರ ಯಾತನೆಯಿಂದ ಕೂಡಿದ ಸ್ಥಳ
ಇದೂ ಕೂಡ ನರಕವು ಒಂದು ಅವಸ್ಥೆ ಅಥವಾ ಸ್ಥಿತಿ ಎಂದು ಉಪದೇಶಿಸುವುದಕ್ಕೆ ಬದಲಾಗಿ ಅದು ಒಂದು ಸ್ಥಳವೆಂದು ಸತ್ಯವೇದಕ್ಕೆ ವಿರೋಧವಾಗಿ ಭೋದಿಸಲಾಗುತ್ತದೆ.
ಇದು ಸಂಪೂರ್ಣ ನಾಶದ ಪರಿಸ್ಥಿತಿಯನ್ನು ಸೂಚಿಸುತ್ತದೆ(**ಮತ್ತಾಯ 10:28**)
ಎಲ್ಲಾ ಆತ್ಮಗಳೂ ನರಕಕ್ಕೆ ಹೋಗುತ್ತವೆ!!
ಯೇಸುಕ್ರಿಸ್ತರೂ ಕೂಡ ನರಕಕ್ಕೆ ಹೋಗಿದ್ದಾರೆ!!
ಮತ್ತು ಎಲ್ಲಾ ಆತ್ಮಗಳೂ ಪುನರುತ್ಥಾನದ ದಿನದಂದು ನರಕದಿಂದ ಹೊರಗೆ ಬರಲಿವೆ.
ಆದರೆ ಪೋಪರು ಹೇಳಿಕೊಳ್ಳುವುದೇನೆಂದರೆ "ಪಾಪ" ಹಾಗೂ ಪೋಪನ "ವೈರಿ"ಯ ಆತ್ಮಗಳು ನಿರಂತರ ಹಿಂಸೆ ಹಾಗೂ ಯಾತನೆಯಿಂದ ಕೂಡಿದ ಸ್ಥಳವಾದ ನರಕಕ್ಕೆ ಹೋಗುತ್ತದೆ ಮತ್ತು ಇದನ್ನು ದೇವರು ತಾವಾಗಿಯೇ ಸೃಷ್ಟಿಮಾಡಿದ್ದಾರೆ ಎಂಬುದಾಗಿದೆ.

.......ಮತ್ತೊಂದು ಉಗಮವಾದ ಸುಳ್ಳು ಉಪದೇಶವೆಂದರೆ,

– > ಮರಣನಂತರದ ಪ್ರಯಶ್ಚಿತ್ತದ ಸ್ಥಳ (Purgatory)

ಹೌದು! ಇದರ ಪ್ರಕಾರ ಹೇಳಿಕೊಳ್ಳುವುದೇನೆಂದರೆ ಬಹುತೇಕ ಆತ್ಮಗಳಲ್ಲಿ ಸ್ವಲ್ಪ ಒಳ್ಳೆಯ ಆತ್ಮಗಳು ಸ್ವರ್ಗ ಲೋಕಕ್ಕೆ ಹೋಗುವುದಿಲ್ಲವೆಂದೂ ಹಾಗೂ "ಸ್ವಲ್ಪ ಕೆಟ್ಟ"ದಾದ ಆತ್ಮಗಳು ನರಕಲೋಕಕ್ಕೆ ಹೋಗುವುದಿಲ್ಲವೆಂದು ಭೋಧಿಸಲಾಗುತ್ತದೆ.

ಆದರಿಂದ ಅವರ ಪಾಪಗಳ ಪ್ರಾಯಶ್ಚಿತ್ತದ ನಿಮಿತ್ತವಾಗಿ ಹಾಗೂ ಅವರು ಸ್ವರ್ಗಲೋಕಕ್ಕೆ ಹೋಗಲು ಬಾಧ್ಯಸ್ಥರನ್ನಾಗಿ ಮಾಡುವುದಕ್ಕೋಸ್ಕರ ನಿಯಮಿತ ಕಾಲದವರೆಗೆ ಅಂಥಹ ಆತ್ಮಗಳನ್ನು ಯಾತನೆ ಮತ್ತು ಶೋಧನೆಗೊಳಪಡಿಸುವುದಕ್ಕಾಗಿ ಮೂರನೇ ಸ್ಥಳವನ್ನು ಸಿದ್ಧಪಡಿಸಲಾಗಿದೆ ಎಂದು ಉಪದೇಶಿಸಲಾಗುತ್ತದೆ.

ಆದರೆ ಸತ್ಯವೇದದಲ್ಲಿ ಇಂಥಹ ಬೋಧನೆಯೇ ಇಲ್ಲ!

– > ನಂತರದ ಸುಳ್ಳು ಬೋಧನೆಯೆಂದರೆ,

– > ಯಾಜಕರುಗಳಲ್ಲಿ ಪಾಪನಿವೇದನೆ

ಹೌದು! ಪಾಪದ ಭಾರವನ್ನು ತಗ್ಗಿಸಬೇಕಾಗಿತ್ತು ಮತ್ತು ಪಾಪವನ್ನು ಕ್ಷಮಿಸುವ ಅಧಿಕಾರವು ಯಾಜಕರುಗಳಿಗೆ ಇದೆ ಎಂಬ ಹಕ್ಕನ್ನು ಸಾಧಿಸಲಾಯಿತು. ಇದರಿಂದಾಗಿ ಪಾಪನಿವೇದನೆಯ ನಿಯಮ ಜಾರಿಯಾಯಿತು. ಇದರಲ್ಲಿ ಯಾಜಕನು ಅಡ್ಡಪಟ್ಟಿಗಳ ಚೌಕಟ್ಟಿನ ಹಿಂಬದಿಯಲ್ಲಿ ಕೂತುಕೊಂಡು ಜನರ ಪಾಪವನ್ನು ಆಲಿಸಿ ಅದಕ್ಕೆ ಪ್ರಾಯಶ್ಚಿತ್ತವನ್ನು ಉಚ್ಚರಿಸುವನು.

ಈ ಸುಳ್ಳು ಬೋಧನೆಯನ್ನು ಮೊದಲನೆಯದಾಗಿ ಮಾರ್ಟಿನ್ ಲೂಥರನು ಸತ್ಯವೇದದಲ್ಲಿರುವ ಸತ್ಯವನ್ನು ಕಂಡುಹಿಡಿದಾಗ ಸುಧಾರಣೆಯ ನಿಮಿತ್ತವಾಗಿ ಬಹಿರಂಗಪಡಿಸಿದನು.

**ರೋಮನರಿಗೆ 1:17 – >** ".....ದೇವರಿಂದ ದೊರಕುವ ನೀತಿಯು ಅದರಲ್ಲಿ ತೋರಿಬರುತ್ತದೆ. ನೀತಿವಂತನು ನಂಬಿಕೆಯಿಂದಲೇ ಬದುಕುವನೆಂಬ ಶಾಸ್ತ್ರೋಕ್ತಿಯ ಪ್ರಕಾರ ಆ ನೀತಿಯು ನಂಬಿಕೆಯ ಫಲವಾಗಿದ್ದು ನಂಬಿಕೆಯನ್ನು ಪ್ರಕಟಿಸುವಂಥದಾಗಿದೆ."

– > ತದನಂತರ ಇನ್ನೊಂದು ಸುಳ್ಳು ಉಪದೇಶ ಜಾರಿಗೆ ಬಂದಿತು

– > "ಪೂಜೆ"ಯಲ್ಲಿ ಯೇಸುಕ್ರಿಸ್ತನ ಬಲಿಯನ್ನು ಪದೇ ಪದೇ ಮಾಡುವುದು.

ಇದು ಅತ್ಯಂತ ದೊಡ್ಡದಾದ ದೇವದೂಷಣೆಯಾಗಿದ್ದು ಯೇಸುಕ್ರಿಸ್ತನು ಮನುಕುಲಕ್ಕಾಗಿ ಒಂದೇ ಸಾರಿ ಕೊಟ್ಟ ಈಡುಬಲಿಯ ಮೌಲ್ಯವನ್ನು ನಾಶಪಡಿಸಿತು(ಹಿಬ್ರಿಯರಿಗೆ 10:12) ಮತ್ತು "ಬಲಿ ಪೂಜೆ ಎಂದು ಕರೆಯುವುದರ ಮೂಲಕ ಬಳಿರೊಟ್ಟಿ ಮತ್ತು ದ್ರಾಕ್ಷಾರಸವನ್ನು ಯೇಸುಕ್ರಿಸ್ತನ ನಿಜವಾದ ದೇಹ ಹಾಗೂ ರಕ್ತ ಎಂದು ಎಣಿಸಿ ದ್ರವ್ಯಾಂತರ ಮಾಡುವುದರೊಂದಿಗೆ ಪದೇ ಪದೇ ಈ ಬಲಿಯನ್ನು ನಿರ್ವಹಿಸಲಾಗುತ್ತದೆ.

ಹೀಗೆ ಈ ಪರಮಪ್ರಸಾದವನ್ನು ಕಚ್ಚಬಾರದು ಎಂಬ ಪುರಾಣ ಸಂಬಂಧವಾದ ನಂಬಿಕೆಯು ಪ್ರಾರಂಭವಾಯಿತು. ಅನೇಕರು ಹೇಳಿಕೊಳ್ಳುವುದೇನೆಂದರೆ ಇದನ್ನು ಕಚ್ಚಿದ್ದರಿಂದ ಕೆಲವರ ಬಾಯಿಗಳು ರಕ್ತದಿಂದ ತುಂಬಿ ತುಳುಕಿದವು ಎಂಬುದಾಗಿದೆ.

ಇದು ರೋಮನ್ ಕ್ಯಾಥೋಲಿಕರ ಬಲವಾದ ನಂಬಿಕೆಯಾಗಿದ್ದು, ಸಂತತಿಯಿಂದ ಸಂತತಿಗೆ ಸಾಗುತ್ತ ಬಂದಿದೆ!!

ನಂತರದ ಸುಳ್ಳು ಬೋಧನೆಯೆಂದರೆ?

ಆರಾಧನೆಯ ಸ್ಥಳಕ್ಕಾಗಿ ಭವ್ಯವಾದ ಕಟ್ಟಡ ಅಥವಾ ಚರ್ಚುಗಳು

ಅನ್ಯಜನಾಂಗ ಹಾಗೂ ಇತರ ಧರ್ಮಗಳ ದೇವಾಲಯಗಳನ್ನು ನೋಡಿ, ದೇವರನ್ನು ಗೌರವಿಸಬೇಕಾದರೆ ಭವ್ಯವಾದ ಹಾಗೂ ಶ್ರೇಷ್ಠವಾದ ಆರಾಧನೆಯ ಸ್ಥಳವನ್ನು ನಿರ್ಮಿಸಬೇಕು ಎಂಬ ಆಲೋಚನೆಯು ಬಂದಿತು!!

ಹೀಗೆ ಜನರನ್ನು "ಸಭೆ" ಎಂದು ಕರೆಯಲ್ಪಡುವ ನಾಮವು ಕಟ್ಟಡಕ್ಕೆ ಕೊಡಲಾಯಿತು. ಸಭೆಯ ಪ್ರಾರಂಭಘಟ್ಟದಲ್ಲಿ ಮನೆಗಳಲ್ಲಿ ಕೂಡುವ ಸರಳತೆಯು ಇಲ್ಲದಂತಾಯಿತು.

ಭವ್ಯವಾದ ಹಾಗೂ ದೊಡ್ಡದಾದ ಕಟ್ಟಡಗಳನ್ನು "ಬಿಷಪ್ಪಿನ ಸಿಂಹಾಸನವಿರುವ ಆರಾಧನಾಲಯ ಎಂದು ಕರೆಯಲಾಯಿತು ಹಾಗೂ ದೇವರು ಎದುರು ನೋಡುವ "ಕ್ರಿಸ್ತನ ಸ್ವರೂಪ"ವೆಂಬ ಕಟ್ಟಡವನ್ನು ಕಟ್ಟುವುದಕ್ಕೆ ಬದಲಾಗಿ ಬಾಹ್ಯ ಕಟ್ಟಡಗಳನ್ನು ನಿರ್ಮಿಸಲು ಬಹಳ ಪ್ರಯಾಸಪಡಲಾಯಿತು.

– > ಆನಂತರದ ಸುಳ್ಳು ಬೋಧನೆಯೆಂದರೆ,

– > ಪ್ರಾದ್ರಿಗಳು ಸಾಮಾನ್ಯರಿಗಿಂತ ಬೇರೆ

ಹೌದು! ಪೂಜೆಯನ್ನು ಮಾಡುವುದರ ಮೂಲಕ ಜನರನ್ನು ಮುನ್ನಡೆಸುವವರಿಗೆ ದೇವರ ವಿಶೇಷ ಸೇವಕರು ಎಂಬ ಮೇಲಿನ ಪದವಿಯನ್ನು ಕೊಡುವುದರ ಮೂಲಕ ಆವರನ್ನು "ಪ್ರಾದ್ರಿ"ಗಳು ಎಂದು ಕರೆಯಲಾಯಿತು ಹಾಗೂ ಇತರರನ್ನು "ಸಾಮಾನ್ಯ" ಜನರು ಎಂದು ಕರೆಯಲಾಯಿತು.
ಈ ಪ್ರಾದ್ರಿಗಳ ವ್ಯತ್ಯಾಸವನ್ನು ತೋರ್ಪಡಿಸುವುದಕ್ಕಾಗಿ ಅವರು ದೇವದರ್ಶನಗುಡಾರದ ಮಹಾಯಾಜಕನನ್ನು ಹೋಲುವ ಅನೇಕ ಬಣ್ಣಗಳಿಂದ ಕೂಡಿದ ಭವ್ಯವಾದ ನಿಲುವಂಗಿಯನ್ನು ಧರಿಸಿಕೊಳ್ಳಲಾರಂಭಿಸಿದರು!!
– > ಮತ್ತೊಂದು ಸುಳ್ಳು ಬೋಧನೆಯೆಂದರೆ,
– > ಸಂತರನ್ನು ಪೂಜಿಸುವುದು ಮತ್ತು ಅವರಲ್ಲಿ ಪ್ರಾರ್ಥಿಸುವುದು
ದೇವರನ್ನು ಆರಾಧಿಸುವ ಒಂದೇ ಮಾರ್ಗವಾದ ಯೇಸುಕ್ರಿಸ್ತನನ್ನು(ಯೋಹಾನನು 14:6) ಬಿಟ್ಟು ಕ್ರಮೇಣವಾಗಿ ಯೇಸುಕ್ರಿಸ್ತನ ತಾಯಿಯಾದ ಮೇರಿ ಹಾಗೂ ಇತರ ಸಂತರ ಮೂಲಕವಾಗಿ ಆರಾಧಿಸುವ ಮಾರ್ಗವು ತೆರೆದುಕೊಂಡಿತು. ಸ್ವಲ್ಪ ಕಾಲದ ನಂತರ ಕ್ರಮೇಣವಾಗಿ ಈ ಮೇರಿ ಹಾಗೂ ಅನೇಕ ಸಂತರನ್ನು ಪೂಜಿಸುವ ಕಾರ್ಯವು ಪ್ರಗತಿ ಹೊಂದಿತು.
– > ಇದಾದ ನಂತರ ಇನ್ನೊಂದು ಸುಳ್ಳು ಬೋಧನೆಯು ಚಾಲ್ತಿನೆ ಬಂದಿದೆ.
– > ತ್ರೈಯೇಕತ್ವ
ಹೌದು! "ಒಬ್ಬರೇ ದೇವರ" ಬಗ್ಗೆ ಇರುವ ಸತ್ಯವು ಮರೆಯಾಗಿ ಕ್ರಮೇಣದಲ್ಲಿ ತಂದೆ ಮತ್ತು ಮಗನ ನಡುವಿನ ವ್ಯಕ್ತಿತ್ವದ ಬಗ್ಗೆ ಗೊಂದಲಗಳು ಏರ್ಪಡಿಸಿ ಇಬ್ಬರೂ ಒಂದೇ ಎಂಬ ನಿರ್ಧಾರಕ್ಕೆ ಬರಲಾಯಿತು!
ಇದಾದ ನಂತರ ದೇವರ ಪರಾಕ್ರಮವಾದ ಪವಿತ್ರ ಆತ್ಮವನ್ನು ವ್ಯಕ್ತಿ ಎಂದು ಕರೆಯಲಾಯಿತು ಮತ್ತು ಅದು ಯೇಸುಕ್ರಿಸ್ತನು ಹಾಗೂ ತಂದೆಗೆ ಸಮನಾದ ವ್ಯಕ್ತಿ ಎಂದು ನಿಶ್ಚಯಿಸಲಾಯಿತು.
ಹೀಗೆ ತ್ರೈಯೇಕ ದೇವರು ಎಂಬ ಗೊಂದಲಮಯವಾದ ಹಾಗೂ ದೇವದೂಷಣೆಯ ಬೋಧನೆಯು ಹುಟ್ಟುಕೊಂಡಿತು.
ಮತ್ತು ಹೀಗೆ ಒಂದಾದ ನಂತರ ಒಂದಾಗಿ ಸಭೆಗೆ ಪ್ರವೇಶಿಸಿದ ಅನೇಕ ಸುಳ್ಳುಬೋಧನೆಗಳನ್ನು ಪಟ್ಟಿ ಮಾಡುತ್ತಾ ಹೋಗಬಹುದು.
ಹೀಗೆ ಸಭೆಯನ್ನು ದೊಡ್ಡ ತಪ್ಪು ಮಾರ್ಗಕ್ಕೆ ಕೊಂಡೊಯ್ಯಲಾಯಿತು ಹಾಗೂ ಈ ಬೋಧನೆಗಳು ಮತ್ತಾಯ 13:25ರಲ್ಲಿ ಬೀಜಗಳೆಂದು ಸೂಚಿಸುವ "ಅಣಜಿ"ಗಳಾಗಿವೆ.
ಇವರನ್ನು ಮತ್ತಾಯ 13:38 "ಸೈತಾನನವರು" ಅಥವಾ ಸುಳ್ಳು ಬೋಧನೆಗಳಿಂದ ಕೂಡಿದ ಕ್ರಿಸ್ತವಿರೋಧಿ ವ್ಯವಸ್ಥೆಯವರು ಎಂದು ಅರ್ಥೈಸಲಾಗಿದೆ.
ಹೀಗೆ ಕ್ರಿಸ್ತವಿರೋಧಿಯು "ತನ್ನನ್ನು ತಾನೇ ಹೆಚ್ಚಿಸಿಕೊಂಡು, ತಾನು ದೇವರೆಂದು(ಪರಾಕ್ರಮ ಉಳ್ಳವನು) ಹೇಳಿಕೊಂಡು ದೇವರ ಗರ್ಭಗುಡಿಯಲ್ಲೇ(ಸಭೆಯಲ್ಲಿ) ಕೂತುಕೊಂಡನು..." – **(2 ಥೆಸಲೋನಿಕದವರಿಗೆ 2:4)**
ಈಗ ಕ್ರಿಸ್ತವಿರೋಧಿಯನ್ನು ಸೂಚಿಸುವ ಇನ್ನೊಂದು ವಚನವನ್ನು ನೋಡೋಣ...

**ಮತ್ತಾಯ 24:15**

"ಆದರಿಂದ ಪ್ರವಾದಿಯಾದ ದಾನಿಯೇಲನು ಹೇಳಿದಂಥ ಹಾಳುಮಾಡುವ ಅಸಹ್ಯ ವಸ್ತುವು ಪವಿತ್ರಸ್ಥಾನದಲ್ಲಿ ನಿಂತಿರುವುದನ್ನು ನೀವು ಕಾಣುವಾಗ(ಇದನ್ನು ಓದುವವನು ತಿಳುಕೊಳ್ಳಲಿ)...."
ಹೌದು! ಇಲ್ಲಿ ಕ್ರಿಸ್ತವಿರೋಧಿಯನ್ನು "ಹಾಳುಮಾಡುವಂಥ ಅಸಹ್ಯವಸ್ತು" ಎಂದು ಸೂಚಿಸಲಾಗಿದೆ.(ದಾನಿಯೇಲನು 12:11)
ಇದು ವಂಚಿಸುವ ನಕಲು ಕ್ರಿಸ್ತನಾಗಿದ್ದು, ಸೈತಾನನ ವ್ಯವಸ್ಥೆಯಾಗಿದೆ!
ಹೌದು! ಇದು "ಗುಪ್ತವಾಗಿರುವ ಅಧರ್ಮವಾಗಿದೆ" – **2 ಥೆಸಲೋನಿಕದವರಿಗೆ 2:7**
ಹೌದು! ಪೋಪ್ ಮಾರ್ಗವು "ಅಸಹ್ಯ" ವ್ಯವಸ್ಥೆಯಾಗಿದ್ದು, ಮಹಾಪರಿಶುದ್ಧ ನಂಬಿಕೆಯ ಸತ್ಯವೇದದ ಸತ್ಯಗಳನ್ನು ಹಾಳುಮಾಡುವಂಥಹ ಅಥವಾ ನಾಶಮಾಡುವಂಥಹ ವ್ಯವಸ್ಥೆಯಾಗಿದೆ.
ಇದರ ಬಗ್ಗೆ ಯೇಸುಕ್ರಿಸ್ತನು ಹೀಗೆ ಎಚ್ಚರಿಕೆ ನೀಡುತ್ತಾರೆ...

**ಯೋಹಾನ 5:43**

"ನಾನು ನನ್ನ ತಂದೆಯ ಹೆಸರಿನ ಮೇಲೆ ಬಂದಿದ್ದೇನೆ; ನನ್ನನ್ನು ನೀವು ಒಪ್ಪಿಕೊಳ್ಳುವುದಿಲ್ಲ! ಮತ್ತೊಬ್ಬನು ಸ್ವಂತ

ಹೆಸರಿನ ಮೇಲೆ ಬಂದರೆ ಅವನನ್ನು ಒಪ್ಪಿಕೊಳ್ಳುವಿರಿ."
ಹೌದು! ಹೆಸರಿಗೆ ಮಾತ್ರ ಯೇಸುಕ್ರಿಸ್ತನ ಹೆಸರನ್ನು ಉಪಯೋಗಿಸುವ ಈ ಕ್ರಿಸ್ತವಿರೋಧಿ ವ್ಯವಸ್ಥೆಯ ಭವಿಷ್ಯದ ಬೆಳವಣಿಗೆಯ ಬಗ್ಗೆ ಇಲ್ಲಿ ಯೇಸುಕ್ರಿಸ್ತನು ಹೇಳುತ್ತಾರೆ ಮತ್ತು ಎಫೆಸದವರಿಗೆ 1:22ರಲ್ಲಿ ಹೇಳಿರುವಪ್ರಾಕರ ಸಭೆ ಮತ್ತು ಯೇಸುಕ್ರಿಸ್ತನ ಅಂಗಗಳನ್ನು ಹೋಲುವಂತೆಯೇ ಪೋಪನು ಕೂಡ ಯೇಸುಕ್ರಿಸ್ತನಾಗಿದ್ದುಕೊಂಡು ತನ್ನ ಸದಸ್ಯರಿಗೆ ಶಿರಸ್ಸಾಗಿದ್ದಾನೆ ಎಂದು ಹೇಳಿಕೊಳ್ಳುತ್ತಾರೆ.
ಈಗ ಕ್ರಿಸ್ತವಿರೋಧಿಯ ಬಗ್ಗೆ ಇನ್ನೊಂದು ಚಿತ್ರಣವನ್ನು ನೋಡುತ್ತೇವೆ
**ದಾನಿಯೇಲನು 7:21**
"ನಾನು ನೋಡುತ್ತಿದ್ದ ಹಾಗೆ ಯಾವ ಕೊಂಬು ಮೊಳೆತು ಮೂರು ಕೊಂಬುಗಳನ್ನು ಬೀಳಿಸಿತೋ...."
ಹೌದು! ಇದು ಸತ್ಯವೇದವನ್ನು ನಂಬುವ ನಿಜವಾದ ಕ್ರಿಸ್ತೀಯರನ್ನು ಪೋಪರು ಕ್ರೂರವಾಗಿ ಹಿಂಸೆಗೊಳಪಡಿಸಿದ ಕಾರ್ಯವನ್ನು ಸೂಚಿಸುತ್ತದೆ. ನಂತರ ಆ ದುಸ್ಥಿತಿಗೆ ತಂದು ಪುನಃ ಹಿಂಸೆಗೊಳಪಡಿಸುವ ಕೃತ್ಯವನ್ನು ಮಾಡುತ್ತಿದ್ದರು. ಈ ಕಾಲವನ್ನು ಕತ್ತಲೆ ಯುಗವೆಂದು ಕರೆಯುತ್ತಾರೆ.
ಪೋಪನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ 5 ಕೋಟಿ ಜನರನ್ನು ಈ 1300 ಕ್ರಿ.ಶ ವರ್ಷಗಳಲ್ಲಿ ಸಾಯಿಸಿದನು.
ಇಂಥಹ ಸಾಯಿಸುವ ಹಾಗೂ ಹಿಂಸೆಗೊಳಿಸುವ ಕೃತ್ಯವನ್ನು "ಕ್ರಮಬದ್ಧ ವಿಚಾರಣೆ" ಅಥವಾ "ಪವಿತ್ರ ಕಛೇರಿ" ಎಂದು ಕರೆಯಲ್ಪಡುವ ವಿಧಾನಗಳ ಮೂಲಕ ಮಾಡಲಾಗುತ್ತಿತ್ತು.
ಸಾಯಿಸುವ ಈ ದುಷ್ಕೃತ್ಯಗಳು ಬಹಳ ಘೋರತೆ ಹಾಗೂ ಕ್ರೂರತನದಿಂದ ಕೂಡಿದ್ದಾಗಿತ್ತು. ಕೆಲವು ವಿಧಾನಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.
– > ಗೂಟಕ್ಕೆ ಅಥವಾ ಕಂಬಕ್ಕೆ ಕಟ್ಟಿ ಅದರ ಸುತ್ತಲೂ ಸ್ವಲ್ಪ ಅಂತರದಲ್ಲಿ ಬೆಂಕೆಯನ್ನು ಹಾಕಿ ನಿಧಾನವಾಗಿ ವೇದನೆ ಹಾಗೂ ಸುಟ್ಟು ಹೋಗುವಂಥೆ ಹಾಗೂ ಮರಣಹೊಂದುವಂತೆ ಮಾಡಲಾಗುತ್ತಿತ್ತು.
– > ದೇಹದ ಕೆಲವು ಸ್ಥಳಗಳಲ್ಲಿ ಚಾಕುವಿನಿಂದ ತಿವಿದು ರಕ್ತ ಸೋರುವಂತೆ ಮಾಡುವುದರ ಮೂಲಕ ನಿಧಾನವಾಗಿ ಸಾಯಿಸಲಾಗುತ್ತಿತ್ತು.
– > ಕರಗಿದ ಸೀಸವನ್ನು ಕಣ್ಣಿಗೆ ಸುರಿಯಲಾಗುತ್ತಿತ್ತು.
– > ಚಕ್ರಗಳಿಗೆ ಬ್ಲೇಡುಗಳನ್ನು ಜೋಡಿಸಿ ಅವುಗಳನ್ನು ದೇಹದ ಮೇಲೆ ಚಲಿಸುವಂತೆ ಮಾಡಿ ಒಂದೊಂದು ಭಾಗಗಳನ್ನು ಕತ್ತರಿಸಲಾಗುತ್ತಿತ್ತು.
– > ಹುಳಿಯಿಂದ ಕಿತ್ತುಹಾಕಲಾಗುತ್ತಿತ್ತು.
– > ಕಣ್ಣುಗಳನ್ನು ಕಿತ್ತುಹಾಕಲಾಗುತ್ತಿತ್ತು.
– > ಎತ್ತರದಿಂದ ದೊಡ್ಡ ಮೊಳೆಗಳ ಮೇಲೆ ತಳ್ಳಿಹಾಕುವುದರಿಂದ ಅವರು ಆ ದೊಡ್ಡ ಮೊಳೆಗಳ ಶೂಲಕ್ಕೆ ಜಡಿಯಲ್ಪಟ್ಟು ಸ್ವಲ್ಪ ಸ್ವಲ್ಪವಾಗಿ ರಕ್ತಯುತ್ತ ನಿಧಾನವಾಗಿ ಸಾಯುತ್ತಿದ್ದರು.
– > ಹಾರುಮದ್ದನ್ನು (Gunpowder) ಬಾಯಿಯೊಳಗೆ ಹಾಕಿ ಅದನ್ನು ಸಿಡಿಸುವುದರ ಮೂಲಕ ತಲೆಯನ್ನು ಛಿದ್ರ ಮಾಡಲಾಗುತ್ತಿತ್ತು.
– > ಬಹು ದಿನಗಳ ತನಕ ಉಪವಾಸ ಹಾಕುವುದರ ಮೂಲಕ ಸಾಯಿಸಲಾಗುತ್ತಿತ್ತು.
– > ಗಾಳಿಯ ಪಂಪುಗಳಿಂದ ದೇಹವು ಹೊಡೆದು ಹೋಗುವ ವರೆಗೆ ಗಾಳಿಯನ್ನು ಊದಲಾಗುತ್ತಿತ್ತು.
– > ಒಬ್ಬನ ದೇಹದಿಂದ ನಜ್ಜು ಗುಜ್ಜು ಮಾಡಿ ತೆಗೆದ ತುಂಡುಗಳನ್ನೇ ಅವನ ಬಾಯಿಗೆತುರಿಸಿ ಉರಿಸುಗಟ್ಟಿಸಿ ಸಾಯಿಸಲಾಗುತ್ತಿತ್ತು.
– > ಹೆಂಗಸರನ್ನು ತಮ್ಮ ತಲೆಗೂದಲಿನಿಂದ ನೇತುಹಾಕಲಾಗುತ್ತಿತ್ತು.
– > ಆನಂತರ ಎರಡೂ ತೋಳುಗಳನ್ನು ತೆರೆದು ತಬ್ಬಿಕೊಳ್ಳಲು ಸಿದ್ಧವಾಗಿ ನಿಂತಿರುವಂತೆ ಇರುವ ಮೇರಿಯ ವಿಗ್ರಹವಿತ್ತು. ಈ ವಿಗ್ರಹದ ಇಡೀ ದೇಹವು ಮೊನಜಾದ ಕತ್ತಿಯಂತಿರುವ ಬ್ಲೇಡುಗಳಿಂದ ಕೂಡಿತ್ತು.
ಸತ್ಯವೇದವನ್ನು ನಂಬುವ ಕ್ರಿಸ್ತೀಯರನು ಈ ಭಯಂಕರವಾದ ವಿಗ್ರಹದ ಮುಂದೆ ತಂದು ನಿಲ್ಲಿಸಿ ತಮ್ಮ ವಿಶ್ವಾಸವನ್ನು ನಿರಾಕರಿಸುವಂತೆ ಹೇಳಲಾಗುತ್ತಿತ್ತು, ಇಲ್ಲದಿದ್ದರೆ "ಮರಣವನ್ನು ತಬ್ಬಿಕೊಳ್ಳುವಂತೆ" ಇರುವ ಈ ಮೇರಿಯ ವಿಗ್ರಹದೊಳಕ್ಕೆ ತಳ್ಳಲಾಗುತ್ತಿತ್ತು.
– > ಮರಣಕ್ಕೆ ಹತ್ತಿರ ಇರುವ ವಿಶ್ವಾಸಿಗಳ ಮೇಲೆ ನಿಗಾ ಇಡುವಂತೆ ವೈದ್ಯರನ್ನು ನೇಮಿಸಲಾಗಿತ್ತು, ಯಾಕೆಂದರೆ ಇಂಥಹವರಿಗೆ ನಿಲ್ಲಿಸಿ ಸುಸ್ಥಿತಿಗೆ ಮರಳುವಂತೆ ಮಾಡಿ ಪುನಃ ಅವರನ್ನು ಹಿಂಸೆಗೆ ಒಳಪಡಿಸಿ ಪೂರ್ಣ ಹಿಂಸೆಮಾಡಿ

ಸಾಯಿಸಲಾಗುತ್ತಿತ್ತು.
ಹೀಗೆ ಪಟ್ಟಿ ಮಾಡುತ್ತಾ ಹೋದರೆ ವಿಶ್ವಾಸಿಗಳನ್ನು ಸಾಯಿಸಲು ಅನೇಕ ಭಯಂಕರ ಹಾಗೂ ಘೋರವಾದ ಮಾರ್ಗಗಳನ್ನು ಉಪಯೋಗಿಸಲಾಗಿವೆ.
ಹೀಗೆ ಸಾಧ್ಯವಾದಷ್ಟು ಹೆಚ್ಚಿನ ಪ್ರಮಾಣದ ಹಿಂಸೆಯನ್ನು ಕೊಡಲು ಪ್ರಯತ್ನ ಮಾಡುತ್ತಿದ್ದರು, ಯಾಕೆಂದರೆ ಇಂಥಹವರನ್ನು ದೇವರು ತಾವಾಗಿಯೇ ನಿತ್ಯ ನರಕಯಾತನೆಗೆ ಕಳುಹಿಸುತ್ತಾರೆ ಎಂದು ಕ್ರಿಸ್ತವಿರೋಧಿಯವರು ಹೇಳಿಕೊಳ್ಳುತ್ತಿದ್ದರು.
ಇವೆಲ್ಲವನ್ನು ದೇವರ ಹಾಗೂ ಯೇಸುಕ್ರಿಸ್ತನ ಹೆಸರಿನಲ್ಲಿ ಮಾಡಲಾಗುತ್ತಿತ್ತು.
ಇತ್ತೀಚೆಗೆ ನಿಧನರಾದ ಪೋಪ್ ಜಾನ್ ಪೌಲ್ – ಇಇರವರು ಇಂಥಹ ಭಯಾನಕ ಕೃತ್ಯಗಳನ್ನು ಎಸಗಿರುವುದಕ್ಕಾಗಿ ಕ್ಷಮೆಯಾಚಿಸಿದ್ದಾರೆ.
ಈಗ ನಾವು ಅಪೋಸ್ತಲನಾದ ಯೋಹಾನನು ಈ ಕ್ರಿಸ್ತವಿರೋಧಿಯ ಕ್ರೂರವಾದ ಕೃತ್ಯಗಳ ದರ್ಶನವನ್ನು ಕಂಡು ಬರೆದದ್ದನ್ನು ಓದೋಣ –
**ಪ್ರಕಟನೆ 17:6**
"ಆ ಸ್ತ್ರೀಯು ದೇವಜನರ ರಕ್ತವನ್ನೂ ಯೇಸುವಿಗೋಸ್ಕರ ಸಾಕ್ಷಿಕೊಟ್ಟು ಹೆತರಾದವರ ರಕ್ತವನ್ನು ಕುಡಿದು ಮತ್ತಳಾಗಿರುವುದನ್ನು ಕಂಡೆನು. ಅವಳನ್ನು ನೋಡಿ ಅತ್ಯಾಶ್ಚರ್ಯಪಟ್ಟೆನು."
ಇಲ್ಲಿ ಅಪೋಸ್ತಲನು ಕ್ರಿಸ್ತವಿರೋಧಿ ಪೋಪರ ವರ್ತನೆಯನ್ನು ಸರಿಯಾಗಿ ವರ್ಣಿಸುತ್ತಾರೆ.
ನಿಜವಾಗಿಯೂ ಈ ಕ್ರಿಸ್ತವಿರೋಧಿ ವ್ಯವಸ್ಥೆಯು ಇಷ್ಟರ ಮಟ್ಟಕ್ಕೆ ದೇವಜನರನ್ನು ಆಳುವುದನ್ನು ದೇವರು ಅನುಮತಿಸಿರುವ ಸಂಗತಿಯು ಆಶ್ಚರ್ಯಗೊಳಿಸುವಂತದ್ದಾಗಿದೆ.
ದಾನಿಯೇಲನು ಈ ಕ್ರಿಸ್ತವಿರೋಧಿ ವ್ಯವಸ್ಥೆಯ ಬಗ್ಗೆ ದರ್ಶನ ಕಂಡದ್ದು ಹೀಗಿದೆ....
**ದಾನಿಯೇಲನು 7:28**
"ದಾನಿಯೇಲನಾದ ನಾನು ನನ್ನ ಯೇಚನೆಗಳಿಂದ ಬಹು ಕಳವಳಗೊಂಡು ಮೊಗಗೆಟ್ಟೆನು,...."
ಹೌದು! ದಾನಿಯೇಲನು ಈ ದರ್ಶನವನ್ನು ಕಂಡು ಕಳವಳ್ಳೊಗಾದನು.... ಹಾಗೂ ಆತನು 8ನೇ ಅಧಿಕಾರದಲ್ಲಿನ ಇನ್ನೊಂದು ದರ್ಶನವನ್ನು ಕಂಡ ನಂತರ "ಕಾಯಿಲೆಬಿದ್ದನು".
**ದಾನಿಯೇಲನು 8:27**
"ಆಗ ದಾನಿಯೇಲನಾದ ನಾನು ಬೆಂಡಾಗಿ ಕೆಲವು ದಿವಸ ಕಾಯಿಲೆಬಿದ್ದೆನು."
ಕ್ರಿಸ್ತವಿರೋಧಿಯ ಬಗ್ಗೆ ಕೇವಲ ಅರ್ಧದಷ್ಟು ಮಾತ್ರ ಸತ್ಯಾಂಶವಾಗಿದೆ. ಅದರಲ್ಲೂ ಕೂಡ ಈ ಕ್ರಿಸ್ತವಿರೋಧಿಯ ಪೋಪ್ ವ್ಯವಸ್ಥೆಯು ನಮ್ಮ ಮಧ್ಯ ನಿಂತಿರುವುದನ್ನು ಕಾಣುವುದಿಲ್ಲವೇ?
ಈ ವ್ಯವಸ್ಥೆಯನ್ನು ಹೇಗೆ ನಾಶಗೊಳಿಸಲಾಗುವುದು?
ಈ ವಿಷಯದ ಬಗ್ಗೆ ಸತ್ಯವೇದವು ಏನು ಹೇಳುತ್ತದೆ?
ಇದಕ್ಕೆ ಉತ್ತರವಾಗಿ ಪ್ರಕಟಣಾ ಗ್ರಂಥದಲ್ಲಿ ತಿಳಿಸಲಾಗಿರುವ ಕ್ರಿಸ್ತವಿರೋಧಿಯ ಇತಿಹಾಸ, ಬೆಳವಣಿಗೆ ಹಾಗೂ ಅಂತಿಮ ವಿನಾಶದ ವಿಷಯಗಳ ಬಗ್ಗೆ ಮುಕ್ತಾಯದ ಅಧ್ಯಾಯನವಾಗಿರುವ ಮುಂದಿನ ತರಗತಿಯಲ್ಲಿ ತಿಳಿದುಕೊಳ್ಳೋಣ...
–ಆಮೇನ್–